ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಬೆಲ್‌ಫೆಸ್ಟ್‌ನಲ್ಲಿ ಭಾರತ ವಿರುದ್ಧ ಶುಕ್ರವಾರ ನಡೆದ ಮೊದಲ ಟಿ-20 ಪಂದ್ಯದಲ್ಲಿ 34 ರನ್‌ಗಳಿಂದ ಜಯಗಳಿಸಿದ ಐರ್ಲೆಂಡ್...

27 ಜೂನ್, 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 108 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ 517ನೇ ಜನ್ಮ ದಿನ 2


ಕಠಿಣ ಅಭ್ಯಾಸದಿಂದ ಗುರಿ ಮುಟ್ಟಲು ಸಾಧ್ಯ » 3


ದೇಣಿಗೆ ಲೂಟಿ : ಸುಪ್ರೀಂ ನೇತೃತ್ವದಲ್ಲಿ ತನಿಖೆಯಾಗಲಿ » 4


# ಟೌನ್‌ಶಿಪ್‌ಗಾಗಿ ರೈತರ ಒಕ್ಕಲೆಬ್ಬಿಸುವುದಿಲ್ಲ

## ಇನ್ನೊಮ್ಮೆ ಪರಿಶೀಲಿಸುತ್ತೇವೆ: ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್

• ಪ್ರಜೋದಯ ವರದಿ

**ಬೆಂಗಳೂರು:** ರೈತರನ್ನ ಒಕ್ಕಲೆಬ್ಬಿಸಿ ಟೌನ್‌ಶಿಪ್ ಮಾಡುವುದರಲ್ಲಿ ಅರ್ಥ ವಿಲ್ಲ. ಭೂ ಪರಿಹಾರ ಬದಲಾವಣೆ ಇದ್ದರೆ ಇನ್ನೊಮ್ಮೆ ಪರಿಶೀಲನೆ ಮಾಡ ಬಹುದೆಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರು ಹೇಳಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೊಂದಲ ವಿಲ್ಲದೇ ರೈತರ ಒಪ್ಪಿಗೆ ಪಡೆದೇ ಟೌನ್ ಶಿಪ್ ಮಾಡುತ್ತೇವೆ. ರೈತರಿಗೆ ಹೆಚ್ಚು ಪರಿಹಾರ ಬೇಕೆಂದರೆ ಕೊಡುವ ಕೆಲಸ ಮಾಡುತ್ತೇವೆ. ಉದ್ದೇಶಿತ ಸ್ಥಳದಲ್ಲಿ ಐಟಿ ಹಬ್ ಮಾಡುವ ಬಗ್ಗೆ ಮಾಹಿತಿ ಇಲ್ಲ. ಎಐ ಹಬ್‌ಗೋಸ್ಕರ ಟೌನ್‌ಶಿಪ್ ಮಾಡುತ್ತಿಲ್ಲ, ಬೆಂಗಳೂರಲ್ಲಿ ದಿನನಿತ್ಯ ಟ್ರಾಫಿಕ್ ಒತ್ತಡ ಇದೆ. ಅದರ ಪಕ್ಕ ದಲ್ಲಿ ಇನ್ನೊಂದು ಟೌನ್‌ಶಿಪ್ ನಿರ್ಮಾ ಣವಾದರೆ ಒತ್ತಡ ಕಡಿಮೆಯಾಗುತ್ತದೆ. ಬೆಂಗಳೂರು ಸಮೀಪದ ಜಿಲ್ಲೆಗಳ ಅಭಿವೃದ್ಧಿ ಮಾಡಿದರೆ ರಾಜಧಾನಿ



ಮೇಲೆ ಒತ್ತಡ ಕಡಿಮೆಯಾಗುತ್ತದೆ ಎಂದರು.

**ರಾಜಕೀಯ ಮಾಡುತ್ತಿಲ್ಲ: ಕುಮಾರಸ್ವಾಮಿ**

ಟೌನ್‌ಶಿಪ್ ವಿಚಾರದಲ್ಲಿ ರಾಜ ಕೀಯ ಮಾಡುತ್ತಿಲ್ಲ. ರಾಜಕೀಯ ಉದ್ದೇಶಕ್ಕಾಗಿ ಅಭಿವೃದ್ಧಿ ತಡೆಯುವ ಉದ್ದೇಶವೂ ನನಗಿಲ್ಲವೆಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿಯವರು ಶುಕ್ರವಾರ ವಿಧಾನಸೌಧದಲ್ಲಿ ಚರ್ಚೆಗೆ ಬನ್ನಿ ಎಂದು ಆಹ್ವಾನಿಸಿದ್ದರು. ಆದರೆ, ಪೂರ್ವ ನಿಯೋಜಿತ ಕಾರ್ಯಕ್ರಮ ದಿಂದಾಗಿ ಸಾಧ್ಯವಾಗಲಿಲ್ಲ. ಶನಿವಾರ ಯೋಜನೆಯಿಂದ ಬಾಧಿತರಾಗಿರುವ ರೈತರ ಸಮ್ಮುಖದಲ್ಲೆ ಚರ್ಚೆ ಮಾಡೋಣವೆಂದು ಪತ್ರ ಬರೆದಿದ್ದೆ. ಆ ಪತ್ರಕ್ಕೆ ಪ್ರತಿಕ್ರಿಯೆ ದೊರೆಯದ ಹಿನ್ನಲೆ ಮತ್ತೊಂದು ಪತ್ರವನ್ನು ಬರೆಯಲಾಗಿದೆ ಎಂದರು.

ಟೌನ್‌ಶಿಪ್ ವಿರೋಧಿಸುತ್ತಿರುವ



ರೈತರೊಂದಿಗೆ ಚರ್ಚೆ ಮಾಡುತ್ತೇನೆ. ಆ ಸಂದರ್ಭದಲ್ಲಿ ಮುಖ್ಯಮಂತ್ರಿ ಯೂ ಬಂದರೆ ಒಳ್ಳೆಯದು. ಟೌನ್

» ಮೂರನೇ ಪುಟದಲ್ಲಿ

> **ಹೆಚ್.ಡಿ.ಕುಮಾರಸ್ವಾಮಿ ಶನಿವಾರ ಭೈರಮಂಗಲಕ್ಕೆ ಭೇಟಿ ನೀಡಲಿದ್ದಾರೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬರಲಿ, ಮುಖ್ಯಮಂತ್ರಿ ವಿಧಾನಸೌಧದಲ್ಲಿ 4 ಗೋಡೆ ಮಧ್ಯೆ ಚರ್ಚೆ ಮಾಡೋಣವೆಂದು ಪತ್ರ ಬರೆದಿದ್ದರು. ಕುಮಾರಸ್ವಾಮಿ ಅವರು ರೈತರ ಸಮ್ಮುಖದಲ್ಲಿ ಚರ್ಚೆಗೆ ಕರೆದಿದ್ದಾರೆ.**
>
> **-ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ**

### ಇಂದು ಭೈರಮಂಗಲಕ್ಕೆ ಹೆಚ್.ಡಿ.ಕೆ.

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಹೋರಾಟ ಮಾಡುತ್ತಿಲ್ಲ. ಯೋಜನೆ ವಿರೋಧಿಸುತ್ತಿರುವ ರೈತರಿಗೆ ಬೆಂಬಲ ನೀಡಲಾಗುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.
ಶನಿವಾರ ರೈತರು ಪ್ರತಿಭಟನೆ ಮಾಡುತ್ತಿರುವ ಭೈರಮಂಗಲಕ್ಕೆ ಹೋಗುತ್ತಿದ್ದೇನೆ. ಮಧ್ಯಾಹ್ನದವರೆಗೂ ಮುಖ್ಯಮಂತ್ರಿಯವರಿಗಾಗಿ ಅಲ್ಲೆ ಕಾಯುತ್ತೇನೆ. ರೈತರೊಂದಿಗೆ ಚರ್ಚೆ ಮಾಡಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದೆಂದರು.

# ತನಿಖಾ ತಂಡದೊಂದಿಗೆ ಸಮಾಲೋಚಿಸಿ ವರದಿ ಸಲ್ಲಿಕೆ

## ಅಡ್ಡ ಮತದಾನ ಸಂಬಂಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಕ್ರಿಯೆ

• ಪ್ರಜೋದಯ ವರದಿ

**ಹಾಸನ:** ಅಡ್ಡ ಮತದಾನದ ಕುರಿತು ತನಿಖೆ ನಡೆಸುತ್ತಿರುವ ತಂಡದೊಂದಿಗೆ ಸಮಲೋಚನೆ ನಡೆಸಿದ ಬಳಿಕ ವರದಿ ಯನ್ನು ಪಕ್ಷದ ಹೈಕಮಾಂಡ್‌ಗೆ ಕಳು ಹಿಸಲಾಗುವುದೆಂದು ಬಿಜೆಪಿ ರಾಜ್ಯಾ ಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಹೇಳಿದರು.

ಶುಕ್ರವಾರ ಆಲೂರಿನಲ್ಲಿ ಸುದ್ದಿ ಗಾರರೊಂದಿಗೆ ಮಾತನಾಡಿದ ಅವರು, ವಿಧಾನ ಪರಿಷತ್ ಚುನಾ ವಣೆಯಲ್ಲಿ ಅಡ್ಡ ಮತದಾನ ಪ್ರಕರ ಣದ ತನಿಖೆ ನಡೆಸುತ್ತಿರುವ ಸಿ.ಟಿ.ರವಿ ಅವರು ವರದಿ ಸಲ್ಲಿಸುವ ಸಂಬಂಧ ಸಮಯ ಕೇಳಿದ್ದಾರೆ. ನಾನು ಮುಂದಿನ ಎರಡು ದಿನ ತಿರುಪತಿಗೆ ತೆರಳುತ್ತಿರುವುದರಿಂದ, ವಾಪಾಸ್ಸಾದ ಬಳಿಕ ಭೇಟಿಯಾಗುವುದಾಗಿ ತಿಳಿಸಿ ದ್ದೇನೆ. ಇನ್ನೂ ಈ ಬಗ್ಗೆ ಸಂಪೂರ್ಣ ವಾಗಿ ಚರ್ಚಿಸಲು ಸಾಧ್ಯವಾಗಿಲ್ಲ. ವರದಿ ಬಂದ ಬಳಿಕ ದೆಹಲಿಗೆ ಕಳುಹಿಸುತ್ತೇನೆಂದು ಹೇಳಿದರು.

ತಮಿಳುನಾಡಿಗೆ ಕಾವೇರಿ ನೀರು



> **ಬಿಡದಿ ಟೌನ್‌ಶಿಪ್ ವಿವಾದದ ಕುರಿತು ವಿಪಕ್ಷ ನಾಯಕ ಆರ್.ಅಶೋಕ್ ಅವರೊಂದಿಗೆ ಚರ್ಚೆ ನಡೆಸಿದ್ದೇನೆ. ಈ ಹೋರಾಟವನ್ನು ಯಾವ ರೀತಿಯಲ್ಲಿ ಮುಂದುವರಿಸಬೇಕೆಂಬ ಬಗ್ಗೆ ಇನ್ನೆರಡು ದಿನಗಳಲ್ಲಿ ತೀರ್ಮಾನ ಕೈಗೊಳ್ಳುತ್ತೇವೆ.**
>
> **-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

ಹರಿಸುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ತಮಿಳುನಾಡಿನ ರೈತರ ಹಿತಾಸಕ್ತಿ ಕಾಯುವ ಮೊದಲು ಕಾವೇರಿ ಕಣಿವೆಯ ರೈತರ ಹಿತ ಕಾಯುವುದು ರಾಜ್ಯ ಸರ್ಕಾರದ ಮೊದಲ ಆದ್ಯತೆ ಆಗಬೇಕು. ರಾಜ್ಯದಲ್ಲಿ ಈಗಾಗಲೇ ಬರಗಾಲದ ಮುನ್ಸೂಚನೆ ಸ್ಪಷ್ಟವಾಗಿದೆ. ಇಂತಹ ಸಂದರ್ಭದಲ್ಲಿ ನಮ್ಮ ರೈತರಿಗೆ ನೀಡಲು ನೀರೇ ಇಲ್ಲ. ನ್ಯಾಯಾಲಯದಲ್ಲಿ ಸಮರ್ಥವಾಗಿ

» ನಾಲ್ಕನೇ ಪುಟದಲ್ಲಿ

# ರಾಮಮಂದಿರಕ್ಕೆ ದೇಣಿಗೆ ನೀಡದವರಿಗೆ ಪ್ರಶ್ನಿಸುವ ಹಕ್ಕಿಲ್ಲ

## ಬಿ.ಕೆ.ಹರಿಪ್ರಸಾದ್, ಕಾಂಗ್ರೆಸ್ ವಿರುದ್ಧ ಸಿ.ಟಿ.ರವಿ ವಾಗ್ದಾಳಿ

• ಪ್ರಜೋದಯ ವರದಿ

**ಹಾಸನ:** ಎಲುಬಿಲ್ಲದ ನಾಲಿಗೆ ಏನು ಬೇಕಾದರೂ ಮಾತನಾಡುತ್ತದೆ. ರಾಮಮಂದಿರ ನಿರ್ಮಾಣಕ್ಕೆ ಹತ್ತು ಪೈಸೆಯನ್ನೂ ದೇಣಿಗೆ ನೀಡದವರಿಗೆ ಅದರ ಬಗ್ಗೆ ಪ್ರಶ್ನಿಸುವ ನೈತಿಕ ಹಕ್ಕಿಲ್ಲ. ರಾಮಮಂದಿರ ನಿರ್ಮಾಣಕ್ಕೆ ದೇಣಿಗೆ ನೀಡಿದ ಭಕ್ತರಿಗೆ ಮಾತ್ರ ಪ್ರಶ್ನಿಸುವ ಹಕ್ಕಿದೆ ಎಂದು ಬಿಜೆಪಿ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಹಾಗು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಆಧುನಿಕ ಮಹಮ್ಮದ್ ಘಜನಿ ಎಂದು ಟೀಕಿಸಿದ್ದ ಕಾಂಗ್ರೆಸ್ ಮುಖಂಡ ಬಿ.ಕೆ. ಹರಿಪ್ರಸಾದ್ ವಿರುದ್ಧ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಶ್ರೀರಾಮನ ಅಸ್ತಿತ್ವವನ್ನೇ ಪ್ರಶ್ನಿಸಿದವರು, ರಾಮಸೇತುವೆ ಇಲ್ಲವೆಂದು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದವರು, ರಾಮ ಮಂದಿರ ನಿರ್ಮಾಣವನ್ನು ವಿರೋಧಿಸಿದವರು ಮತ್ತು ಹೋರಾಟಗಾರರ ಮೇಲೆ ಗೋಲಿಬಾರ್ ನಡೆಸಿ ಜೈಲಿಗೆ ಕಳುಹಿಸಿದವರಿಗೆ ರಾಮಮಂದಿರದ ಬಗ್ಗೆ ಮಾತನಾಡುವ ಅಧಿಕಾರವಿಲ್ಲವೆಂದು ಆರೋಪಿಸಿದರು.

ರಾಮಮಂದಿರದಲ್ಲಿ ಹಣ ದುರುಪಯೋಗದ ಆರೋಪ ಕುರಿತು ಪ್ರತಿಕ್ರಿಯಿಸಿದ ಅವರು, ಜಾತ್ರೆಗೆ ದೇವರ ಭಕ್ತಿಯೊಂದಿಗೆ ಬರುವವರೂ ಇರುತ್ತಾರೆ, ಮನರಂಜನೆಗಾಗಿ ಬರುವವರೂ ಇರುತ್ತಾರೆ, ಕಳ್ಳತನ ಮಾಡಲು ಬರುವವರೂ ಇರುತ್ತಾರೆ. ಅದಕ್ಕಾಗಿ ಜಾತ್ರೆಯೇ ತಪ್ಪು ಎಂದು ಹೇಳಲು ಸಾಧ್ಯವಿಲ್ಲ. ತಪ್ಪು ಮಾಡಿದ ವರನ್ನು



ಹಿಡಿಯಲು ಪೊಲೀಸ್ ವ್ಯವಸ್ಥೆ ಇದೆ. ರಾಮಮಂದಿರದಲ್ಲಿ ಭಕ್ತರು ಅರ್ಪಿಸಿದ ಕಾಣಿಕೆಯನ್ನು ದುರುಪಯೋಗ ಪಡಿಸಿಕೊಂಡಿದ್ದರೆ ತಪ್ಪಿತಸ್ಥರ ವಿರುದ್ಧ ಎಸ್‌ಐಟಿ ತನಿಖೆ ನಡೆಯುತ್ತಿದೆ. ಯಾರನ್ನೂ ಬಿಡುವುದಿಲ್ಲವೆಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಹೇಳಿದ್ದು, ತನಿಖೆ ನಡೆಯುತ್ತಿದೆ. ಇದನ್ನು ನೆಪ ಮಾಡಿಕೊಂಡು ರಾಮಮಂದಿರ ನಿರ್ಮಾಣವನ್ನೇ ಪ್ರಶ್ನಿಸುವುದು ಸರಿಯಲ್ಲ ಎಂದರು.

ಬಿ.ಕೆ.ಹರಿಪ್ರಸಾದ್ ಅವರು ಸಂಜಯ್‌ಗಾಂಧಿ ಬ್ರಿಗೇಡ್‌ನಲ್ಲಿ ಇದ್ದವರು. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಂಜಯ್‌ಗಾಂಧಿ ಬ್ರಿಗೇಡ್ ಮಾಡಬಾರದ್ದನ್ನೆಲ್ಲ ಮಾಡಿದೆ. ಸರ್ವಾಧಿಕಾರ ಎಂದರೆ ಏನೆಂಬುದನ್ನು ದೇಶದ ಜನರು ಇಂದಿರಾ ಗಾಂಧಿ ಅವರ ತುರ್ತು ಪರಿಸ್ಥಿತಿ ಕಾಲದಲ್ಲೇ ಅನುಭವಿಸಿದ್ದಾರೆ. ಆ ಅವಧಿಯಲ್ಲಿ ಅವರ ಅನುಯಾಯಿಗಳ ವರ್ತನೆಯನ್ನೂ ದೇಶ ಕಂಡಿದೆ. ಅಂತಹವರಿಂದ ಇನ್ನೇನು ನಿರೀಕ್ಷೆ ಮಾಡಬಹುದೆಂದು ಪ್ರಶ್ನಿಸಿದರು.

ದೇಶಭಕ್ತ ಸಂಘಟನೆಯಾದ ಆರ್

### ಶೀಘ್ರದಲ್ಲೇ ರಾಜ್ಯಾಧ್ಯಕ್ಷರಿಗೆ ವರದಿ

ಅಡ್ಡ ಮತದಾನ ಪ್ರಕರಣದ ತನಿಖೆ ವರದಿಯನ್ನು ಬಿಜೆಪಿ ರಾಜ್ಯಾಧ್ಯಕ್ಷರಿಗೆ ಶೀಘ್ರದಲ್ಲೇ ಸಲ್ಲಿಸಲಾಗುವುದು. ರಾಜ್ಯಾಧ್ಯಕ್ಷರನ್ನು ಇನ್ನೂ ಭೇಟಿ ಮಾಡಲು ಸಾಧ್ಯವಾಗಿಲ್ಲ. ಅವರು ಲಭ್ಯ ಇರಲಿಲ್ಲ. ಭೇಟಿ ಆದ ಬಳಿಕ ವರದಿಯನ್ನು ಸಲ್ಲಿಸುತ್ತೇವೆಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರು ತಿಳಿಸಿದರು.

ಎಸ್‌ಎಸ್‌ನ್ನು ಟೀಕಿಸುವುದರಿಂದ ದೇಶಕ್ಕೆ ಯಾವುದೇ ಪ್ರಯೋಜನವಾಗುವುದಿಲ್ಲ. ಅಂತಹ ಹೇಳಿಕೆಗಳು ದೇಶವನ್ನು ವಿಭಜಿಸಲು ಪ್ರಯತ್ನಿಸುವವರಿಗೆ ಹಾಗೂ ಕಾಂಗ್ರೆಸ್‌ಗೆ ತಾತ್ಕಾಲಿಕ ರಾಜಕೀಯ ಲಾಭ ತರುವುದಷ್ಟೇ ಎಂದು ಆರೋಪಿಸಿದರು.

ಶಾಸಕ ಸಿಮೆಂಟ್ ಮಂಜು ವಿರುದ್ಧ ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಮಾಡಿರುವ ಅಡ್ಡ ಮತದಾನದ ಆರೋಪದ ಕುರಿತು ಪ್ರತಿಕ್ರಿಯಿಸಿದ ಸಿ.ಟಿ.ರವಿ ಅವರು, ಆ ರೀತಿಯ ಆರೋಪವನ್ನು ನಾನು ಸಾರ್ವಜನಿಕವಾಗಿ ಮಾಡಲು ಬಯಸುವುದಿಲ್ಲ. ಕಾಣದಿರುವುದನ್ನು ಕಂಡಂತೆ ಹೇಳುವುದು ಸರಿಯಲ್ಲ. ನನ್ನ ಮನಸ್ಸಿನಲ್ಲಿ ಬೇರೆ ಪದ ಬರುತ್ತಿದೆ. ಆದರೆ, ಅದನ್ನು ನಾನು ಹೇಳುವುದಿಲ್ಲವೆಂದು ಪ್ರತಿಕ್ರಿಯಿಸಿದರು.

**ಗೃಹಲಕ್ಷ್ಮಿ ಯೋಜನೆ ಅಕ್ರಮ ತನಿಖೆಯಾಗಲಿ**

ಗೃಹಲಕ್ಷ್ಮಿ ಯೋಜನೆ ಪ್ರಾಥಮಿಕ ಮಾಹಿತಿಯ ಪ್ರಕಾರ ಸುಮಾರು 240 ಕೋ.ರೂ. ನಕಲಿ ಖಾತೆಗಳಿಗೆ ಜಮೆಯಾಗಿದೆ ಎಂಬ ಆರೋಪ ಕೇಳಿ ಬಂದಿದೆ. ಈ ಹಣ ಯಾರ ಖಾತೆಗೆ ಹೋಗಿದೆ ಎಂಬುದರ ಕುರಿತು ಸಮಗ್ರ ತನಿಖೆ ನಡೆಸಬೇಕು. ಮುಖ್ಯಮಂತ್ರಿ ಈ ಬಗ್ಗೆ ಇನ್ನೂ ಸ್ಪಷ್ಟನೆ ನೀಡದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ಹೇಳಿದರು.

### ಸರ್ಕಾರ ಎಚ್ಚೆತ್ತುಕೊಳ್ಳಲಿ

ಬರಗಾಲದ ಛಾಯೆ ಕಾಣಿಸುತ್ತಿದೆ. ರಾಜ್ಯದ ಶೇ.40ರಷ್ಟು ಗ್ರಾಮಗಳಲ್ಲಿ ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ಇದೆ. ಎಲ್‌ನಿನೊ ಪರಿಣಾಮದಿಂದ ಮಳೆ ಕೊರತೆಯಾಗುವ ಸಾಧ್ಯತೆ ಇದೆ ಎಂಬ ವರದಿಗಳಿವೆ. ಈ ಹಿನ್ನಲೆ ಸರ್ಕಾರ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಹಾಗು ಜನರಿಗೆ ಉದ್ಯೋಗಾವಕಾಶ ಕಲ್ಪಿಸುವತ್ತ ತಕ್ಷಣ ಕ್ರಮ ಕೈಗೊಳ್ಳಬೇಕು. ಆದರೆ, ಸರ್ಕಾರ ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿದೆ ಎಂದು ಸಿ.ಟಿ.ರವಿ ಅವರು ಟೀಕಿಸಿದರು.

# ಆರ್‌ಎಸ್‌ಎಸ್ ಟೀಕೆಯಿಂದ ನಾಯಕತ್ವ ಬರುವುದಿಲ್ಲ

## ಕಾನೂನು ಸುವ್ಯವಸ್ಥೆಗೆ ಆದ್ಯತೆ ನೀಡಿ | ಪ್ರಿಯಾಂಕ್ ಖರ್ಗೆಗೆ ಪ್ರತಾಪ್ ಸಿಂಹ ತಿರುಗೇಟು

• ಪ್ರಜೋದಯ ವರದಿ

**ಹಾಸನ:** ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ತಮ್ಮ ಇಲಾಖೆಗಳ ಸಾಧನೆಗಿಂತ ಆರ್‌ಎಸ್‌ಎಸ್ ವಿರುದ್ಧ ಟೀಕೆ ಮಾಡುವುದರಲ್ಲೇ ಕಾಲ ಕಳೆಯುತ್ತಿದ್ದಾರೆ. ನಿರಂತರ ಟೀಕೆ ಮಾಡುವುದರಿಂದ ನಾಯಕತ್ವ ಬರುವುದಿಲ್ಲವೆಂದು ಮಾಜಿ ಸಂಸದ ಪ್ರತಾಪ್ ಸಿಂಹ ಅವರು ವಾಗ್ದಾಳಿ ನಡೆಸಿದರು.

ಶುಕ್ರವಾರ ಆಲೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್ ದಿನಗೂಲಿ ಅಥವಾ ಮಾಸಿಕ ಸಂಬಳಕ್ಕಾಗಿ ದುಡಿಯುವ ಕಾರ್ಯಕರ್ತರ ಸಂಘಟನೆ ಅಲ್ಲ. ಅವರಿಗೆ ವೈಯಕ್ತಿಕ ಲಾಭದ ಚಿಂತೆ ಇಲ್ಲ, ದೇಶ, ರಾಷ್ಟ್ರ ನಿರ್ಮಾಣವೇ ಅವರ ಧ್ಯೇಯ. ಇಂತಹ ಸಂಘಟನೆಯನ್ನು ಹೆದರಿಸಲು ಇಂದಿರಾ ಗಾಂಧಿ ಅಥವಾ ಜವಾಹರ



ಲಾಲ್ ನೆಹರೂ ಅವರಿಂದಲೂ ಸಾಧ್ಯವಾಗಲಿಲ್ಲ. ಈಗ ಇಂದಿರಾ ಗಾಂಧಿ ಅವರ ಮೊಮ್ಮಕ್ಕಳ ಹೆಸರಿಟ್ಟುಕೊಂಡು ಹೆದರಿಸಲು ಬಂದರೆ ನಡೆಯುವುದಿಲ್ಲವೆಂದು ತಿರುಗೇಟು ನೀಡಿದರು.

ಕಳೆದ ಮೂರು ವರ್ಷಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಆರ್‌ಡಿಪಿ ಆರ್) ಹಾಗು ಮಾಹಿತಿ ತಂತ್ರ ಜ್ಞಾನಜೈವಿಕ ತಂತ್ರಜ್ಞಾನ (ಐಟಿಬಿಟಿ) ಸಚಿವರಾಗಿದ್ದ ಪ್ರಿಯಾಂಕ್ ಖರ್ಗೆ, ತಮ್ಮ ಇಲಾಖೆಯಲ್ಲಿ ಮಾಡಿರುವ ಗಮನಾರ್ಹ ಸಾಧನೆಯ ಬಗ್ಗೆ ಮಾತ ನಾಡಲಿಲ್ಲ. ಬೆಳಿಗ್ಗೆಯಿಂದ ಸಂಜೆಯ ವರೆಗೆ ಆರ್‌ಎಸ್‌ಎಸ್ ವಿರುದ್ಧ ಟೀಕೆ ಮಾಡುವುದನ್ನೇ ಮಾಡಿದ್ದಾರೆಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಹಾಗು ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸಲು ಸರ್ಕಾರ ಧೈರ್ಯ ತೋರಲಿಲ್ಲ. ಆರ್‌ಡಿಪಿಆರ್ ಸಚಿವರಾಗಿದ್ದರೂ ಜನಪರ ಕೆಲಸ ಮಾಡದ ಕಾರಣ ಚುನಾವಣೆ ನಡೆದರೆ ಕಾಂಗ್ರೆಸ್‌ಗೆ ಹಿನ್ನಡೆಯಾಗುತ್ತದೆ ಎಂಬ ಭಯದಿಂದಲೇ ಚುನಾವಣೆ ಮುಂದೂಡಲಾಯಿತು. ಈಗ ಅಂತಹ ವ್ಯಕ್ತಿಗೆ ಗೃಹ ಖಾತೆ ನೀಡಲಾಗಿದೆ ಎಂದು ಟೀಕಿಸಿದರು.

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ, ಡ್ರಗ್ಸ್ ಹಾವಳಿ ಹೆಚ್ಚುತ್ತಿದೆ. ಮೈಸೂರಿನಲ್ಲಿ ಹಕ್ಕಿಪಿಕ್ಕಿ ಸಮುದಾಯದ ಯುವತಿಯ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣದಂತಹ ಗಂಭೀರ

» ನಾಲ್ಕನೇ ಪುಟದಲ್ಲಿ

### ಅಕ್ರಮ ವಲಸಿಗರ ಪರಿಶೀಲನೆ ಅಗತ್ಯ

ಕಾಫಿ ತೋಟಗಳಲ್ಲಿ ಕಾರ್ಮಿಕರ ಕೊರತೆಯಿಂದ ಹೊರ ರಾಜ್ಯಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಬರುತ್ತಿದ್ದಾರೆ. ಅಸ್ಸಾಂನವರು ಎಂದು ಹೇಳಿಕೊಂಡು ಅನೇಕರು ಕೆಲಸಕ್ಕೆ ಬರುತ್ತಿದ್ದಾರೆ. ಅವರಲ್ಲಿ ಅಕ್ರಮವಾಗಿ ಬಾಂಗ್ಲಾದೇಶದಿಂದ ಬಂದವರು ಇದ್ದಾರೆಯೇ ಎಂಬುದನ್ನು ಸರ್ಕಾರ ಸಮಗ್ರವಾಗಿ ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕೆಂದು ಪ್ರತಾಪ್ ಸಿಂಹ ಅವರು ಆಗ್ರಹಿಸಿದರು.

# ಇಂದು ಕೆಂಪೇಗೌಡ ಜಯಂತಿ

• ಪ್ರಜೋದಯ ವರದಿ

**ಹಾಸನ :** ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜೂ.27 ರಂದು ಬೆಳಿಗ್ಗೆ 11 ಗಂಟೆಗೆ ನಾಡಪ್ರಭು ಶ್ರೀ ಕೆಂಪೇಗೌಡ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ಕಾರ್ಯಕ್ರಮ ಉದ್ಘಾಟಿಸಿ, ಆಶೀರ್ವಚನ ನೀಡಲಿದ್ದಾರೆ, ರಾಜ್ಯ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿಯಲ್ಲಿ, ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್, ಮಾಜಿ ಸಚಿವ ಹೆಚ್.ಡಿ ರೇವಣ್ಣ, ಶಾಸಕರಾದ ಸಿ.ಎನ್ ಬಾಲಕೃಷ್ಣ, ಎ.ಮಂಜು, ಹೆಚ್.ಕೆ ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯರು, ನಾಗರಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ ಭಾಗವಹಿಸಲಿದ್ದಾರೆ. ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಡಾ.ಬಿ.ಎಸ್. ಮಂಜುನಾಥ ಸ್ವಾಮಿ, ಮೈಸೂರು ವಿಭಾಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಮುಂತಾದವರು ಭಾಗವಹಿಸಲಿದ್ದಾರೆ.

# ಕೆ.ಎಸ್.ಲಿಂಗೇಶ್ ಬಂಧನ ರಾಜಕೀಯ ಪ್ರೇರಿತ

• ಪ್ರಜೋದಯ ವರದಿ

**ಹಾಸನ:** ಜೆಡಿಎಸ್ ಜಿಲ್ಲಾಧ್ಯಕ್ಷ, ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಬಂಧನ ರಾಜಕೀಯ ಪ್ರೇರಿತವಾಗಿದೆ ಎಂದು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಲವು ವರ್ಷಗಳ ಹಿಂದಿನ ಪ್ರಕರಣದಲ್ಲಿ ತನಿಖೆ ನಡೆದು ಬಹಳ ಸಮಯ ಕಳೆದ ಬಳಿಕ, ಈಗ ಬಂಧಿಸಿರುವುದು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ನಿಷ್ಪಕ್ಷಪಾತ ತನಿಖೆ ನಡೆದರೆ ಅವರು ಆರೋಪಗಳಿಂದ ಮುಕ್ತರಾಗಲಿದ್ದಾರೆಂದು ವಿಶ್ವಾಸ ವ್ಯಕ್ತಪಡಿಸಿದರು.

ಕೆ.ಎಸ್.ಲಿಂಗೇಶ್ ಅವರು ನಿರಾಪರಾಧಿ ಎಂಬುದು ನಮ್ಮ ಅಭಿಪ್ರಾಯ. ಈ ಪ್ರಕರಣದಲ್ಲಿ ಅಧಿಕಾರಿಗಳ ಪಾತ್ರವೂ ಇರುತ್ತದೆ. ಈ ಬಗ್ಗೆ ನಿಷ್ಪಕ್ಷಪಾತವಾಗಿ, ತ್ವರಿತವಾಗಿ ತನಿಖೆ ನಡೆಸಬೇಕೆಂಬುದು ನಮ್ಮ ಒತ್ತಾಯವಾಗಿದೆ. ತನಿಖೆಯ ನಂತರವೇ ಸತ್ಯಾಂಶ ಹೊರಬರಲಿದೆ ಎಂದರು.




**ವಿಶ್ವನಾಥ್ ಆರೋಪಕ್ಕೆ ತಿರುಗೇಟು**

ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಅವರು ತಮ್ಮ ವಿರುದ್ಧ ಮಾಡಿರುವ ಆರೋಪಗಳನ್ನು ತಳ್ಳಿಹಾಕಿದ ಕುಮಾರಸ್ವಾಮಿ ಅವರು, 15 ವರ್ಷ ಲೂಟಿ ಮಾಡಿದ್ದೇನೆಂದು ಹೇಳುವವರು ಆಗ ನಮ್ಮೊಂದಿಗೇ ಇದ್ದರು. ಆರೋಪ ಸತ್ಯವಾಗಿದ್ದರೆ ಆಗಲೇ ದೂರು ನೀಡಬೇಕಿತ್ತು. ಈಗ ಆರೋಪ ಮಾಡುವುದಕ್ಕೆ ಯಾವುದೇ ಅರ್ಥವಿಲ್ಲವೆಂದು ಪ್ರತಿಕ್ರಿಯಿಸಿದರು.

ಕಾಮಗಾರಿ ನಡೆಸಲು ಶಾಸಕರು ಅವಕಾಶ ನೀಡುತ್ತಿಲ್ಲ ಎಂಬುದು ಬಿಜೆಪಿ ಮುಖಂಡ, ಗುತ್ತಿಗೆದಾರ ಲೋಕೇಶ್ ಅವರ ಆರೋಪ ಸಾಂಕೇತಿಕವಷ್ಟೇ. ಇನ್ನೂ ಸಾಕಷ್ಟು ಆರೋಪಗಳಿವೆ. ತಾವು ಶಾಸಕರಾಗಿ ಸಂದರ್ಭದಲ್ಲಿ ಮಂಜೂರಾದ ಹಲವು ಅಭಿವೃದ್ಧಿ ಯೋಜನೆಗಳು ಇನ್ನೂ ಪೂರ್ಣಗೊಂಡಿಲ್ಲ ಮಾತ್ರವಲ್ಲೇ, ಇನ್ನೂ ಕೆಲವು ಪ್ರಾರಂಭವಾಗಿಯೇ ಇಲ್ಲವೆಂದು ದೂರಿದರು.

ಸಕಲೇಶಪುರ ಪಟ್ಟಣದಲ್ಲಿ ನಡೆಯುತ್ತಿರುವ ಫುಡ್‌ಕೋರ್ಟ್ ಅವೈಜ್ಞಾನಿಕವಾಗಿ ನಿರ್ಮಾಣ ಮಾಡಲಾಗುತ್ತಿದೆ. ಈ ಬಗ್ಗೆ ಸಿಮೆಂಟ್ ಮಂಜು ಅವರಿಗೆ ಮನವರಿಕೆ ಮಾಡಿ ಕೊಡಲಾಗುವುದು. ಬೇರೆ ಕಡೆ ನಿರ್ಮಾಣ ಮಾಡುವುದು ಸೂಕ್ತವೆಂದು ಹೇಳಿದರು.

ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಎಸ್. ದ್ಯಾವೇಗೌಡ, ವಕ್ತಾರ ರಘು ಹೊಂಗೆರೆ, ಶೇಷಾದ್ರಿ, ಸಮೀರ್ ಹಾಜರಿದ್ದರು.

# ಕುದರಂಗಿ ಗ್ರಾಮದಲ್ಲಿ ಒಂಟಿ ಸಲಗ ಹಾವಳಿ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಕುದರಂಗಿ ಗ್ರಾಮದಲ್ಲಿ ಒಂಟಿ ಸಲಗದ ಹಾವಳಿ ಮುಂದುವರಿದಿದೆ. ಗುರುವಾರ ರಾತ್ರಿ ಮನೆ ಸಮೀಪಕ್ಕೆ ಬಂದ ಕಾಡಾನೆ ಕೆಲ ಸಮಯ ಆತಂಕ ಸೃಷ್ಟಿಸಿದೆ.

ಗ್ರಾಮದ ಸುರೇಶ್ ಎಂಬುವವರ ಮನೆ ಸಮೀಪಕ್ಕೆ ಬಂದ ಒಂಟಿ ಸಲಗ ಕೆಲಕಾಲ ಮನೆಯ ಆವರಣದಲ್ಲಿ ಓಡಾಡಿದೆ. ಈ ವೇಳೆ ಮನೆಯಲ್ಲಿದ್ದ ಜನರು ಭಯಭೀತರಾಗಿ ಮನೆಯಿಂದ ಹೊರಬರದೆ ಆತಂಕದಲ್ಲಿ ಕಾಲ ಕಳೆದಿದ್ದಾರೆ. ಮನೆಯ ಮುಂಭಾಗದಲ್ಲಿ ನಿಲ್ಲಿಸಲಾಗಿದ್ದ ಕಾರಿನ ಬಳಿ ತೆರಳಿದ ಕಾಡಾನೆ, ಕಾರನ್ನು ಜಖಂಗೊಳಿಸಲು ಯತ್ನಿಸಿದ್ದು, ಈ ದೃಶ್ಯಗಳು ಮನೆಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಇತ್ತೀಚಿನ ದಿನಗಳಲ್ಲಿ ಕುದರಂಗಿ, ಸುಳ್ಳಕ್ಕಿ, ಶಾಂತಪುರ ಸೇರಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಾಡಾನೆಗಳ ಸಂಚಾರ ಹೆಚ್ಚಾಗಿದ್ದು, ರಾತ್ರಿ ವೇಳೆ ಗ್ರಾಮಸ್ಥರು ಭಯದ ವಾತಾವರಣದಲ್ಲಿ ಜೀವನ ನಡೆಸುವಂತಾಗಿದೆ.

ಮಾಹಿತಿ ತಿಳಿಯುತ್ತಿದ್ದಂತ ವಲಯ ಅರಣ್ಯಾಧಿಕಾರಿ ಹೇಮಂತ್,




ಇಟಿಎಫ್ ಸಿಬ್ಬಂದಿ ಮನೆ ಬಳಿಗೆ ತೆರಳಿ ಪರಿಶೀಲನೆ ನಡೆಸಿದರು. ಅರಣ್ಯ ಇಲಾಖೆ ಸಿಬ್ಬಂದಿ ಕಾಡಾನೆಗಳ ಚಲನವಲನದ ಮೇಲೆ ನಿಗಾ ವಹಿಸಿ, ಗ್ರಾಮಸ್ಥರಿಗೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದೆ. ಕಾಡಾನೆಗಳ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸಿ, ಜನರ ಹಾಗು ಆಸ್ತಿಪಾಸ್ತಿಗಳ ರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## 1,05,536 ಮಕ್ಕಳಿಗೆ ಲಸಿಕೆ ಗುರಿ | 3488 ಸದಸ್ಯರ ತಂಡ ರಚನೆ

# ನಾಳೆ ಜಿಲ್ಲಾದ್ಯಂತ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನ

• ಪ್ರಜೋದಯ ವರದಿ

**ಹಾಸನ:** ಪೋಲಿಯೋ ಮುಕ್ತ ಜಿಲ್ಲೆ ನಿರ್ಮಾಣ ಉದ್ದೇಶದಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜೂ.28ರ ಭಾನುವಾರ ಲಸಿಕಾ ಅಭಿಯಾನ ಹಮ್ಮಿಕೊಂಡಿದೆ.

ಈ ಕಾರ್ಯಕ್ಕಾಗಿ ನಗರ ಭಾಗದಲ್ಲಿ 140 ಹಾಗು ಗ್ರಾಮೀಣ ವ್ಯಾಪ್ತಿಯಲ್ಲಿ 732 ಸೇರಿ 872 ಲಸಿಕಾ ಬೂತ್‌ಗಳನ್ನು ತೆರೆಯಲಾಗುತ್ತಿದೆ. 0-5 ವರ್ಷದೊಳಗಿನ ಮಕ್ಕಳಿಗೆ ಈ ಹಿಂದೆ ಎಷ್ಟೇ ಬಾರಿ ಪಲ್ಸ್ ಪೋಲಿಯೋ ಲಸಿಕೆ ಹಾಕಿಸಿದ್ದರೂ ಜೂ.28ರ ಭಾನುವಾರ ನಡೆಯುವ ಅಭಿಯಾನದಲ್ಲೂ ಎರಡು ಹನಿ ಲಸಿಕೆ ಹಾಕಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಅನಿಲ್ ಅವರು ಕೋರಿದ್ದಾರೆ.

ಎರಡು ಹನಿ-ಪೋಲಿಯೋ ವಿರುದ್ಧ ನಿರಂತರ ಗೆಲುವು ಎಂಬ ಘೋಷ ವಾಕ್ಯದೊಂದಿಗೆ ಈ ವರ್ಷದ ಅಭಿಯಾನ ಕೈಗೆತ್ತಿಕೊಳ್ಳಲಾಗಿದೆ.




ಜಿಲ್ಲೆಯ 1,05,536 ಮಕ್ಕಳಿಗೆ ಹನಿ ನೀಡಲಾಗುವುದು. ಲಸಿಕಾ ಅಭಿಯಾನದಲ್ಲಿ ಪಾಲ್ಗೊಳ್ಳಲು ಬೂತ್‌ವಾರು ತಂಡ ರಚಿಸಿದ್ದು, 4 ಸದಸ್ಯರಿಗೆ ಒಂದರಂತೆ 3488 ತಂಡ ರಚಿಸಲಾಗಿದೆ. ತಲಾ ಇಬ್ಬರಂತೆ 1744 ತಂಡ ರಚಿಸಿದ್ದು, ಅವರು ಮನೆ-ಮನೆ ಭೇಟಿ ನೀಡಿ ಲಸಿಕೆ ನೀಡಲಿದ್ದಾರೆ. 179 ಮೇಲ್ವಿಚಾರಕರು (5 ಬೂತ್‌ಗಳಿಗೆ ಒಬ್ಬರಂತೆ) ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ನೇಮಿಸಲಾಗಿದೆ. ತಾಲ್ಲೂಕುವಾರು ಪಲ್ಸ್ ಪೋಲಿಯೋ ಸೂಕ್ಷ್ಮ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ. ಲಸಿಕಾ ಕಾರ್ಯಕ್ರಮವು ಗ್ರಾಮೀಣ ಪ್ರದೇಶದಲ್ಲಿ 3 ಹಾಗು ನಗರ ಪ್ರದೇಶದಲ್ಲಿ 4 ದಿನ ನಡೆಯುತ್ತದೆ.

ಪ್ರತಿ ತಾಲ್ಲೂಕಿಗೆ ಒಂದು ಮೊಬೈಲ್ ಟೀಂ (ಸಂಚಾರಿ ತಂಡ) ರಚಿಸಲಾಗಿದೆ. ಒಟ್ಟು 20 Transit Points ಗಳನ್ನು ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ದೇವಸ್ಥಾನ, ರಿಂಗ್ ರಸ್ತೆ, ಟೋಲ್‌ಗೇಟ್‌ಗಳಲ್ಲಿ ಸ್ಥಾಪಿಸಲಾಗಿದ್ದು, 0-5 ವರ್ಷದ ಮಕ್ಕಳನ್ನು ಗುರುತಿಸಿ ಪೋಲಿಯೋ ಹನಿಯನ್ನು ನೀಡಲು ಕ್ರಮ ವಹಿಸಲಾಗಿದೆ.

> **ಮಗುವಿನ ರಕ್ಷಣೆ ವಿಚಾರದಲ್ಲಿ ಪೋಷಕರು ನಿರ್ಲಕ್ಷ್ಯ ವಹಿಸಬಾರದು. ಜಿಲ್ಲಾದ್ಯಂತ ಹಮ್ಮಿಕೊಂಡಿರುವ ಅಭಿಯಾನದಲ್ಲಿ 0 ಯಿಂದ 5 ವರ್ಷದೊಳಗಿನ ಮಕ್ಕಳಿಗೆ ಎರಡು ಹನಿ ಪೋಲಿಯೋ ಹನಿ ಹಾಕಿಸಬೇಕು. ಜಿಲ್ಲಾಡಳಿತದ ಪ್ರಯತ್ನ ಸಾಕಾರಗೊಳ್ಳಲು ಎಲ್ಲರೂ ಸಹಕರಿಸಬೇಕು.**
>
> **-ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ**

ಮೊದಲ ಸುತ್ತಿನಲ್ಲಿ ಒಟ್ಟು 3488 ವ್ಯಾಕ್ಸಿನೇಟರ್ ಮತ್ತು 179 ಮೇಲ್ವಿಚಾರಕರನ್ನು ಗುರುತಿಸಿ ಸೂಕ್ತ ತರಬೇತಿ ನೀಡಲಾಗಿದೆ. 1,05,536 ಮಕ್ಕಳಿಗೆ 134951 ಡೋಸ್ ಅಂದರೆ 6715 ವಾಯಿಲ್‌ಗಳು ಬೇಕಾಗಿದ್ದು, ಜಿಲ್ಲೆಗೆ 151900 ಡೋಸ್ ಅಂದರೆ 7595 ವಾಯಿಲ್ ಲಸಿಕೆ ಹಾಗು 2000 ಮಾರ್ಕರ್ ಪೆನ್‌ಗಳು ರಾಜ್ಯ ಸರ್ಕಾರದಿಂದ ಪೂರೈಕೆಯಾಗಿದೆ. ಪಲ್ಸ್ ಪೋಲಿಯೋ ಲಸಿಕೆಯನ್ನು ಜಿಲ್ಲಾ ಲಸಿಕಾ ಉಗ್ರಾಣದಿಂದ ಸಂಬಂಧಪಟ್ಟ ಆರೋಗ್ಯ ಸಂಸ್ಥೆಗಳಿಗೆ ರವಾನಿಸಲಾಗಿದ್ದು, ಈ ಕಾರ್ಯಕ್ರಮಕ್ಕೆ ಅವಶ್ಯವಿರುವ Vaccine Carrier, Cold Box, ILR, Deep Freezer Ice Pack ಗಳಿಗೆ ಪೂರ್ಣ ಸಿದ್ಧತೆ ಮಾಡಿಕೊಳ್ಳಲಾಗಿದೆ.

**ತಾಲ್ಲೂಕುವಾರು ಮಕ್ಕಳ ಸಂಖ್ಯೆ**

ಆಲೂರಿನಲ್ಲಿ 5,165, ಅರಕಲಗೂಡು 10,771, ಅರಸೀಕೆರೆ 17,571, ಬೇಲೂರು 10,452, ಚನ್ನರಾಯಪಟ್ಟಣದಲ್ಲಿ 14,190, ಹಾಸನ ತಾಲ್ಲೂಕಿನಲ್ಲಿ 11,188, ಹೊಳೆನರಸೀಪುರ 11,188, ಸಕಲೇಶಪುರ ತಾಲ್ಲೂಕಿನಾದ್ಯಂತ 7,262 ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಗುರಿ ಹಾಕಿಕೊಳ್ಳಲಾಗಿದೆ.

### ಆಪರೇಷನ್ ಸಿಂದೂರ: ಹುತಾತ್ಮ ಯೋಧರ ಹೆಸರು ಪ್ರಕಟ

• ಪ್ರಜೋದಯ ವರದಿ

**ನವದೆಹಲಿ:** ಕಳೆದ ವರ್ಷ ನಡೆಸಿದ ಆಪರೇಷನ್ ಸಿಂದೂರ ಸೇನಾ ಕಾರ್ಯಾಚರಣೆ ವೇಳೆ ಹುತಾತ್ಮರಾದ ಆರು ಯೋಧರ ಹೆಸರುಗಳನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ.

ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಹುತಾತ್ಮರ ಹೆಸರುಗಳನ್ನು ಕೆತ್ತಲಾಗಿದ್ದು, ಸ್ಮಾರಕಕ್ಕೆ ಸಂಬಂಧಿಸಿದ ವೆಬ್‌ಸೈಟ್‌ನಲ್ಲಿಯೂ ಪಟ್ಟಿ ಬಿಡುಗಡೆ ಮಾಡಲಾಗಿದೆ. ಸೇನೆಯ ವಿವಿಧ ಪಡೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸುಬೇದಾರ್ ಮೇಜರ್ ಪವನ್ ಕುಮಾರ್, ರೈಫಲ್‌ಮನ್ ಸುನಿಲ್ ಕುಮಾರ್, ಲ್ಯಾನ್ಸ್ ನಾಯಕ್ ದಿನೇಶ್ ಕುಮಾರ್, ವಾಯುಸೇನೆ ತಂತ್ರಜ್ಞ ಎಂ.ಮುರಳಿನಾಯಕ್, ಸುನಿಲ್ ಕುಮಾರ್ ಸಿಂಗ್, ಸರ್ಜಂಟ್ ಸುರೇಂದ್ರ ಕುಮಾರ್ ಅವರು ಆಪರೇಷನ್ ಸಿಂದೂರ ವೇಳೆ ಹುತಾತ್ಮರಾಗಿದ್ದಾರೆಂದು ತಿಳಿಸಲಾಗಿದೆ. ಭಾರತ-ಪಾಕಿಸ್ತಾನ ಪಡೆಗಳು ನಡೆಸಿದ ಸಂಘರ್ಷದ ವೇಳೆ ಎರಡೂ ಕಡೆ ಸಾಕಷ್ಟು ಹಾನಿಯಾಗಿದೆ.

# ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ 517ನೇ ಜನ್ಮದಿನ



ಅಂತರರಾಷ್ಟ್ರೀಯ ಪ್ರಸಿದ್ದಿ ಪಡೆದ ಬೆಂಗಳೂರು ಕರ್ನಾಟಕದ ರಾಜಧಾನಿಯಾಗಿದ್ದು ಸಿಲಿಕಾನ್ ವ್ಯಾಲಿ ಎಂದೇ ಖ್ಯಾತಿ ಪಡೆದಿದೆ. ಒಂದೊಮ್ಮೆ ಬೆಂದಕಾಳೂರು ಎಂದು ಕರೆಯಲಾಗುತ್ತಿದ್ದ ಇಂದಿನ ಬೆಂಗಳೂರು ಇಂದು ನಗರೀಕರಣ, ಕೈಗಾರಿಕೀಕರಣ, ಖಾಸಗೀಕರಣ, ಔದ್ಯೋಗೀಕರಣ, ವಿಜ್ಞಾನ ಮತ್ತು ತಂತ್ರಜ್ಞಾನ, ಖಗೋಳ ಮತ್ತು ವೈಮಾನಿಕ, ಸಾಮಾಜಿಕ, ಐತಿಹಾಸಿಕ, ಆರ್ಥಿಕ, ರಾಜಕೀಯ, ಕಲಾ ಪ್ರಪಂಚದ ಸಿನಿಮಾ ಲೋಕ ಮತ್ತು ದೂರದರ್ಶನದ ಜಗತ್ತು, ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆ ಮುಂತಾದ ಕ್ಷೇತ್ರಗಳಲ್ಲಿ ನಮ್ಮ ಬೆಂಗಳೂರು ಪ್ರಪಂಚವನ್ನೆ ದಿಗ್ಭ್ರಗೊಳಿಸುವ ನಿಟ್ಟಿನಲ್ಲಿ ಬೆಳೆದು ನಿಂತಿದೆ. ಒಂದು ಕ್ಷೇತ್ರವು ಮತ್ತೊಂದು ಕ್ಷೇತ್ರಕ್ಕಿಂತಲೂ ವಿಭಿನ್ನ ಹಾಗೂ ವೈಶಿಷ್ಟ್ಯ ಪೂರ್ಣವಾದ ವೈವಿಧ್ಯಮಯತೆಯನ್ನು ಹೊಂದಿದೆ. ಇಂತಹ ಅಭೂತ ಪೂರ್ವ ನಾಡನ್ನು ಕಟ್ಟಿ ಬೆಳೆಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ ಎಂದು ಚಿಂತಿಸುವುದಾದರೆ, ಅಂದು 16ನೇ ಶತಮಾನದಲ್ಲಿ ಈ ನಾಡನ್ನು ಕಟ್ಟಿದವರು ನಾಡಪ್ರಭು ಕೆಂಪೇಗೌಡರು. ಬೆಂಗಳೂರಿಗೆ ಕೆಂಪೇಗೌಡರ ಕೊಡುಗೆ ಅಪಾರ. ಆದ್ದರಿಂದ ಇವರಿಗೆ ಬೆಂಗಳೂರು ನಿರ್ಮಾತೃ ಎಂಬ ಹೆಗ್ಗಳಿಕೆಯಿದೆ.

**ಜನನ ಮತ್ತು ಬಾಲ್ಯ**

ನಾಡಪ್ರಭು ಎಂದೆನಿಸಿದ ಕೆಂಪೇಗೌಡರು ಕ್ರಿ.ಶ. 1510 ರ ಜೂನ್ 27ರಂದು ಕೆಂಪನಂಜೇಗೌಡ ಹಾಗೂ ಲಿಂಗಾಂಬೆ ದಂಪತಿಗಳಿಗೆ ಯಲಹಂಕದಲ್ಲಿ ಜನಿಸಿದರು. ಇವರನ್ನು ಮೊದಲನೆಯ ಕೆಂಪೇಗೌಡರು ಎಂದೂ ಕರೆಯಲಾಗುತ್ತದೆ. ಕೆಂಪೇಗೌಡರ ವಂಶದ ಕುಲದೇವತೆಯಾದ ಕೆಂಪಮ್ಮ ಹಾಗೂ ಭೈರವರ ಅನುಗ್ರಹದಿಂದ ಹುಟ್ಟಿದ ಕಾರಣದಿಂದಾಗಿ ಕೆಂಪನಂಜೇಗೌಡ ದಂಪತಿಗಳು ಬಾಲಕ ಕೆಂಪಯ್ಯನನ್ನು ಪ್ರಜೆಗಳು ಗೌರವಾದರದಿಂದ, ಚಿಕ್ಕರಾಯ, ಕೆಂಪರಾಯ ಎಂದು ಸಂಬೋಧಿಸುತ್ತಿರುತ್ತಾರೆ. 1510, ಜೂನ್-27ರಂದು ಇವರು ಜನಿಸಿದರೆಂಬ ಮಗುವಿಗೆ ಕೆಂಪ, ಕೆಂಪಯ್ಯ, ಕೆಂಪಣ್ಣ ಎಂಬ ಹೆಸರಿನಿಂದ ಕರೆಯುತ್ತಿರುತ್ತಾರೆ. ದಾಖಲೆಗಳ ಆಧಾರದ ಮೇಲೆ ಪ್ರತಿವರ್ಷ ಜೂನ್ 27ನ್ನು ಕೆಂಪೇಗೌಡ ಜಯಂತಿ ಎಂಬುದಾಗಿ ಕರ್ನಾಟಕದಲ್ಲಿ ಆಚರಿಸಲಾಗುತ್ತಿದೆ. ಇದೀಗ ಕೆಂಪೇಗೌಡರ 517 ನೇ ಜನ್ಮದಿನವನ್ನು ಆಚರಿಸಲಾಯಿತು.

**ವೀಕ್ಷಣೆ ಮತ್ತು ನಿರ್ಧಾರ**

ತಲಕಾಡುಗೊಂಡ, ಕರ್ನಾಟಕ ರಾಜ್ಯರಮಾರಮಣ ಎಂದು ಬಿರುದಾಂಕಿತನಾದ ಶ್ರೀಕೃಷ್ಣದೇವರಾಯರು ಕ್ರಿ.ಶ. 1509 ರಲ್ಲಿ ವಿಜಯನಗರ ಸಾಮ್ರಾಜ್ಯದ ಸಿಂಹಾಸನವೇರಿದರು. ಇವರ ಆಡಳಿತದ ಕಾಲವನ್ನು ಸುವರ್ಣಯುಗವೆಂದು ಕರೆಯಲಾಗಿದೆ. ಇವರ ಆಡಳಿತಾವಧಿಯಲ್ಲಿ ನಡೆದ ಹಲವಾರು ಯುದ್ಧಗಳಲ್ಲಿ ಜಯಗಳಿಸಿ ತಮ್ಮ ಸೈನ್ಯದ ಅಸಾಧಾರಣ ಸಾಮರ್ಥ್ಯ ಹಾಗೂ ವಿಜಯನಗರದ ಸಾಮ್ರಾಜ್ಯದ ವೈಭೋಗವನ್ನು ಅನಾವರಣ ಮಾಡಲೆಂದು ಕ್ರಿ.ಶ.1515 ರಲ್ಲಿ ರಾಜಧಾನಿ ಹಂಪಿಯಲ್ಲಿ ಪ್ರಥಮ ಬಾರಿಗೆ ವಿಜಯದಶಮಿ ಉತ್ಸವವನ್ನು ಆರಂಭಿಸಿದರು. ಈ ಅದ್ಭುತ ಸಮಾರಂಭಕ್ಕೆ ತಂದೆ ಕೆಂಪನಂಜೇಗೌಡರ ಜೊತೆ ಹೋಗಿದ್ದ ಬಾಲಕ ಕೆಂಪರಾಯನ ವಯಸ್ಸು ಆಗ ಐದು ವರ್ಷ. ಆಗಲೇ ಈ ಬಾಲಕನ ಮನಸ್ಸಿನಲ್ಲಿ ತಾನೊಂದು ವಿಜಯನಗರದಂತಹ ಸಾಮ್ರಾಜ್ಯವನ್ನು ಕಟ್ಟಬೇಕು ಎಂದೆನಿಸಿತು. ಸ್ಥಳೀಯವಾಗಿ ನಾಡಪ್ರಭು ಕೆಂಪೇಗೌಡ ಎಂದು ಪೂಜಿಸಲಾಗುವ ಇವರು ಆರಂಭಿಕ-ಆಧುನಿಕ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯದ ಅಡಿಯಲ್ಲಿ ಮುಖ್ಯಸ್ಥರಾಗಿ ಕಾರ್ಯನಿರ್ವಹಣೆ ಮಾಡಿದ್ದಾರೆ.

**ಹಿನ್ನೆಲೆ :**

ಮಾಗಡಿ ಕೆಂಪೇಗೌಡ, ಯಲಹಂಕ ಕೆಂಪೇಗೌಡ, ನಾಡಪ್ರಭು ಕೆಂಪೇಗೌಡರು ಬೇರೆ ಬೇರೆಯೇ ಅಥವಾ ಎಲ್ಲರೂ ಒಬ್ಬರೇ ಎನ್ನುವ ಪ್ರಶ್ನೆಗಳು ಈಗಲೂ ಆಗಿಂದಾಗ್ಗೆ ಕೇಳಿಬರುತ್ತವೆ. ಕ್ರಿ.ಶ. 1420 ರಲ್ಲಿ ಅಧಿಕಾರಕ್ಕೆ ಬಂದ ಯಲಹಂಕ ಕೆಂಪೇಗೌಡ ರಣಭೈರೇಗೌಡರ ಹಿರಿಯ ಮಗ ಜಯಪ್ಪಗೌಡ ಎನ್ನಲಾಗುತ್ತದೆ. ಹದಿಮೂರು ವರ್ಷಗಳ ಕಾಲ ಆಡಳಿತ ನಡೆಸಿ ಕ್ರಿ.ಶ. 1433ರಲ್ಲಿ ಮೃತಪಟ್ಟಿದ್ದರು. ಅವರಿಗೆ ಇಬ್ಬರು ಮಕ್ಕಳು ಗಿಡ್ಡೆಗೌಡ ಮತ್ತು ಮಾಚಯ್ಯ ಗೌಡ, ಹಿರಿಯ ಪುತ್ರ ಗಿಡ್ಡೆಗೌಡರು ಅಧಿಕಾರಕ್ಕೆ ಬಂದರು. ಮನೆದೇವರಾದ ಕರಗದಮ್ಮನಿಗೆ ಕೆಂಪಮ್ಮನವರು ಹರಕೆ ಹೊತ್ತು ಹಲವು ವರ್ಷಗಳ ನಂತರ ಅವರಿಗೆ ಗಂಡು ಮಗು ಹುಟ್ಟಿತು. ಆ ಮಗುವಿಗೆ ಕೆಂಪನಂಜೇ ಗೌಡ ಎಂದು ನಾಮಕರಣ ಮಾಡಲಾಯಿತು. ಹತ್ತು ವರ್ಷಗಳ ಕಾಲ ಆಡಳಿತ ನಡೆಸಿದ್ದ ಗಿಡ್ಡೆಗೌಡರ ನಂತರ ಕೆಂಪನಂಜೇಗೌಡರು ಅಧಿಕಾರಕ್ಕೆ ಬಂದರು. ಸರಿ ಸುಮಾರು ಎಪ್ಪತ್ತು ವರ್ಷಗಳ ಕಾಲ ಆಡಳಿತ ನಡೆಸಿದರು. ಇವರ ಮೊದಲನೆ ಮಗನೇ ಕೆಂಪೇಗೌಡರು. ಇವರು ಬೆಂಗಳೂರಿನ ಯಲಹಂಕ ಉಪನಗರದಲ್ಲಿ ಮೊರಸು ಒಕ್ಕಲಿಗ ಸಮುದಾಯಕ್ಕೆ ಸೇರಿದವರಾಗಿದ್ದರು. ಕೆಂಪೇಗೌಡರು ತಮ್ಮ ಬಾಲ್ಯದಲ್ಲಿ ನಾಯಕತ್ವದ ಕೌಶಲ್ಯವನ್ನು ಹೊಂದಿದ್ದರೆಂದು ಖ್ಯಾತಿ ಪಡೆದಿದ್ದರು.



**ಶಿಕ್ಷಣ ಮತ್ತು ನಾಯಕತ್ವ**


ಬಾಲ್ಯದಲ್ಲಿಯೇ ಚುರುಕಾಗಿದ್ದ ಕೆಂಪೇಗೌಡರಿಗೆ ಅರಮನೆಯ ಪುರೋಹಿತರೂ, ಹಿತಚಿಂತಕರೂ ಆಗಿದ್ದ ಐಗಂಡಪುರದ ಮಾಧವಭಟ್ಟರ ಗುರುಕುಲಾಶ್ರಮದಲ್ಲಿ ಸಾಮಾನ್ಯ ವಿದ್ಯಾರ್ಥಿಗಳ ಜೊತೆಯಲ್ಲಿಯೇ ವಿಧ್ಯಾಭ್ಯಾಸ ಮಾಡಿಸುತ್ತಾರೆ. ರಾಮಾಯಣ-ಮಹಾಭಾರತದ ಕಥೆಗಳು ಹಾಗೂ ತಮ್ಮ ವಂಶಸ್ಥರ ಉತ್ತಮ ಪುಣ್ಯದ ಕಾರ್ಯಗಳನ್ನು ಕೇಳಿ ಬೆಳೆದಿದ್ದ ಬಾಲಕನಿಗೆ ಸಹಜವಾಗಿಯೇ ವಿದ್ಯಾಭಾಸದ ಬಗ್ಗೆ ಆಸಕ್ತಿ ಹೆಚ್ಚಾಗಿರುತ್ತದೆ. ಗುರುಕುಲದಲ್ಲಿ ಸಾಮಾನ್ಯ ಶಿಕ್ಷಣದ ಜೊತೆಗೆ ರಾಜೋಚಿತವಾದ ಕತ್ತಿವರಸೆ, ಕುದುರೆ ಸವಾರಿ, ಮಲ್ಲಕಾಳಗ, ರಾಜನೀತಿ, ಆರ್ಥಿಕ ತಿಳಿವಳಿಕೆ ಮುಂತಾದ ವಿಷಯಗಳಲ್ಲೂ ಪರಿಣತಿ ಪಡೆಯುತ್ತಾರೆ. ಒಟ್ಟಾರೆ ಕೆಂಪೇಗೌಡರು ಒಂಬತ್ತು ವರ್ಷಗಳ ಕಾಲ ಹೇಸರಘಟ್ಟ ಸಮೀಪದ ಹಳ್ಳಿಯಾದ ಐವರುಕಂದಪುರ ಅಥವಾ ಐಗೊಂಡಾಪುರ ಗುರುಕುಲದಲ್ಲಿ ಶಿಕ್ಷಣ ಪಡೆದರು ಎಂದು ತಿಳಿದುಬರುತ್ತದೆ. ಅಲ್ಲಿ ನಾಯಕತ್ವದ ಗುಣಗಳನ್ನು ಮೈಗೂಡಿಸಿಕೊಂಡು ಪ್ರದರ್ಶಿಸಿದರು.

**ಅಧಿಕಾರ ಸ್ವೀಕಾರ ಮತ್ತು ಆಡಳಿತ**

ವೃದ್ಧಾಪ್ಯ ವಯಸ್ಸಿನಲ್ಲಿದ್ದ ಕೆಂಪನಂಜೇಗೌಡರು ತಮ್ಮ ಹಿರಿಯ ಮಗನಾದ ಕೆಂಪೇಗೌಡರಿಗೆ ರಾಜ್ಯವಾಳುವ ಎಲ್ಲಾ ಅರ್ಹತೆಯಿದೆಯೆಂದು ಅರಿತು ಕ್ರಿ.ಶ.1523 ರಲ್ಲಿ ನಾಡಪ್ರಭುಗಳ ಅಧಿಕಾರ ವಹಿಸಿಕೊಡುತ್ತಾರೆ. ವಿಜಯನಗರದ ಅರಸರು ಹಿಂದಿನಿಂದಲೂ ಕೆಂಪೇಗೌಡರ ವಂಶಸ್ಥರ ಮೇಲಿಟ್ಟಿದ್ದ ನಂಬಿಕೆಗೆ ಚ್ಯುತಿ ಬಾರದಂತೆ ನಡೆದುಕೊಳ್ಳುವ ಕೆಂಪೇಗೌಡರು ಇನ್ನಿತರೆ ಸಾಮಂತರಂತೆ ಸ್ವತಂತ್ರರಾಗಲು ಒಪ್ಪುವುದಿಲ್ಲ. ಬದಲಿಗೆ ವಿಜಯನಗರ ಸಾಮ್ರಾಜ್ಯಕ್ಕೆ ತಮ್ಮ ನಿಷ್ಠೆಯನ್ನು ಮುಂದುವರೆಸುತ್ತಾರೆ. ಕೆಂಪೇಗೌಡರು ಅಧಿಕಾರಕ್ಕೆ ಬಂದ ಕಾಲಕ್ಕೆ ಯಲಹಂಕ ನಾಡಿನಲ್ಲಿ ಗಂಭೀರ ಪರಿಸ್ಥಿತಿಯಿತ್ತು. ಅಕ್ಕಪಕ್ಕದ ಪಾಳೇಗಾರರರು ಅಸೂಯೆಯಿಂದ ಕುದಿಯುತ್ತಿದ್ದರು. ಮತ್ತೊಂದೆಡೆ ವಿಜಯನಗರದ ಗಡಿಯಲ್ಲಿ ಬಹಮನಿ ಸುಲ್ತಾನರ ಸೈನ್ಯದ ಕೋಟಲೆ ಹೆಚ್ಚಿತ್ತು. ವಿಜಯನಗರದ ಅಖಂಡತೆಯನ್ನು ಕಾಪಾಡಲು ಸದಾ ಸಿದ್ಧವಾಗಿದ್ದ ಕೆಂಪೇಗೌಡರು ತಮ್ಮ ಸೋದರ ಸೋಮೇಗೌಡ ಮತ್ತು ಬಸವೇಗೌಡರ ಜೊತೆ ಸೇರಿ ಹಲವು ಯುದ್ಧಗಳನ್ನು ಜಯಿಸುತ್ತಾರೆ. ಮೊರಸು ಒಕ್ಕಲಿಗರು ಯಲಹಂಕದಲ್ಲಿ ವಿಜಯನಗರದ ಸಾಮಂತರಾಗಿ ಆಡಳಿತ ನಡೆಸುತ್ತಿದ್ದರು. ಕೆಂಪೇಗೌಡರು ಯಲಹಂಕ ದೊರೆಗಳಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದಾರೆ. ಇವರು ತಮ್ಮ ತಂದೆಯಿಂದ ಯಲಹಂಕ ನಾಡಿನ ಅಧಿಕಾರ ಸ್ವೀಕಾರ ಮಾಡಿ ನಲವತ್ತಾರು ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದಂತಿರುವ ಪೆನುಕೊಂಡದಲ್ಲಿ ಕೆಂಪೇಗೌಡರು ಅಧಿಕಾರಕ್ಕೆ ಬರುತ್ತಾರೆ ಎಂಬ ಭಯದಿಂದ ಚನ್ನಪಟ್ಟಣದಲ್ಲಿದ್ದ ಪಕ್ಕದ ಪಾಳೆಗಾರನಾದ ಜಗದೇವರಾಯನು ವಿಜಯನಗರ ಚಕ್ರವರ್ತಿ ಸದಾಶಿವರಾಯರಿಗೆ ದೂರು ನೀಡಿದನು. ಆ ದೂರಿನ ಮೇರೆಗೆ ಕೆಂಪೇಗೌಡರ ಪ್ರದೇಶಗಳನ್ನು ವಶಪಡಿಸಿಕೊಳ್ಳಲಾಯಿತು ಮತ್ತು ಅವರನ್ನು ಐದು ವರ್ಷಗಳ ಕಾಲ ಕಾರಾಗೃಹದಲ್ಲಿ ಇರಿಸಲಾಯಿತು. ಅಲ್ಲಿಂದ ಬಿಡುಗಡೆ ಹೊಂದಿದ ನಂತರ, ಕೆಂಪೇಗೌಡರು ತಮ್ಮ ಪ್ರದೇಶಗಳಿಗೆ ಮರಳಿದರು. ಆದಾಗ್ಯೂ, ನಂತರದ ವರ್ಷಗಳಲ್ಲಿ, ಅವರ ಚಟುವಟಿಕೆಗಳಿಂದ ಸಂತಸಗೊಂಡ ವಿಜಯನಗರದ ಸಾಮ್ರಾಟರು ಕೆಂಪೇಗೌಡರಿಗೆ ತಮ್ಮ ಪ್ರದೇಶಗಳಿಗೆ ಹೊಂದಿಕೊಂಡಂತಿದ್ದ ಹತ್ತಿರದ ಹಳ್ಳಿಗಳಾದ ಹಲಸೂರು, ಬೇಗೂರು, ವರ್ತೂರು, ಜಿಗಣಿ, ತಲಗಟ್ಟಾಪುರ, ಕುಂಬಳಗೋಡು, ಕೆಂಗೇರಿ ಮತ್ತು ಬಾಣಾವರ ಪ್ರದೇಶಗಳನ್ನು ನೀಡಿದರು. ಇದು ಕೆಂಪೇಗೌಡರ ಒಳ್ಳೆಯತನಕ್ಕೆ ಸಿಕ್ಕಿದ ಪ್ರತಿಫಲವಾಗಿತ್ತು.

**ಬೆಂಗಳೂರು ನಿರ್ಮಾಣ**

ಕೆಂಪೇಗೌಡರು ಕ್ರಿ.ಶ. 1528 ರಲ್ಲಿ ಯುವರಾಜರಾಗಿ ಪಟ್ಟಾಭಿಷೇಕವಾದ ಈ ಮೇಲೆ ವಿಜಯನಗರ ಸಾಮ್ರಾಜ್ಯದ ವೈಭವ ಈ ಮೊದಲೇ ನೋಡಿದ್ದರಿಂದ ಅಂತದ್ದೇ ಒಂದು ನಗರವನ್ನು ಸ್ಥಾಪಿಸಬೇಕು ಎಂಬ ಕನಸು ಕಂಡಿದ್ದ ಇವರು ನಂತರದ ವರ್ಷಗಳಲ್ಲಿ ವಿಜಯನಗರದ ಚಕ್ರವರ್ತಿ ಅಚ್ಯುತರಾಯರ ಅನುಮತಿಯೊಂದಿಗೆ ಅವರು ಕ್ರಿ.ಶ.1537 ರಲ್ಲಿ ಬೆಂಗಳೂರು ಕೋಟೆ ಮತ್ತು ಪಟ್ಟಣವನ್ನು ನಿರ್ಮಿಸಿದರು. ಅದಲ್ಲದೇ ಯಲಹಂಕದಿಂದ ಹೊಸ ಬೆಂಗಳೂರು ಪೇಟೆಗೆ ತಮ್ಮ ರಾಜಧಾನಿಯನ್ನು ಸ್ಥಳಾಂತರಿಸಿದರು ಮತ್ತು ನಗರವನ್ನು ಬೆಳೆಸುವಲ್ಲಿ ಸಾಕಷ್ಟು ಶ್ರಮವಹಿಸಿದ್ದರು.



**ದೂರದೃಷ್ಟಿ**

ಭವಿಷ್ಯದಲ್ಲಿ ಬೆಂಗಳೂರಿಗರು ಆರ್ಥಿಕವಾಗಿ ಕುಗ್ಗಬಾರದು ಎಂದು ದೂರದೃಷ್ಟಿಯನ್ನು ಹೊಂದಿದ್ದರು. ಜೊತೆಗೆ ಜನರ ಅಗತ್ಯತೆಗೆ ಅನುಗುಣವಾಗಿ ನಾಲ್ಕು ದಿಕ್ಕಿಗೆ ನಾಲ್ಕು ಗೋಪುರ, ಪ್ರತಿ ಬಡಾವಣೆಗೆ ಒಂದು ಕೆರೆ, ನೂರಾರು ಜನರ ವೃತ್ತಿಗೆ ಅನುಗುಣವಾಗಿ ರಸ್ತೆಗಳನ್ನು ನಿರ್ಮಿಸಿದ್ದರು. ನಗರದಲ್ಲಿ ಕುಡಿಯುವ ಮತ್ತು ಕೃಷಿ ಅಗತ್ಯಗಳನ್ನು ಪೂರೈಸಲು ಸುಮಾರು ಒಂದು ಸಾವಿರ ಕೆರೆಗಳನ್ನು ಅಭಿವೃದ್ಧಿಪಡಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಸುಮಾರು 46 ವರ್ಷಗಳ ಕಾಲ ಸುಧೀರ್ಘ ಆಡಳಿತ ನಡೆಸಿ ಜನರ ಒಳಿತಿಗಾಗಿ ಶ್ರಮವಹಿಸಿದ್ದರು. ದೊಡ್ಡಪೇಟೆ, ಚಿಕ್ಕಪೇಟೆ, ನಗರದ-ಪೇಟೆ ಬೀದಿಗಳು, ಸಾಮಾನ್ಯ ಸರಕುಗಳ ಮಾರಾಟಕ್ಕಾಗಿ ಅರಳೆಪೇಟೆ, ತರಗುಪೇಟೆ, ಅಕ್ಕಿ ಪೇಟೆ, ರಾಗಿಪೇಟೆ, ಬಳೆಪೇಟೆ ಮುಂತಾದವು ಕ್ರಮವಾಗಿ ಹತ್ತಿ, ಧಾನ್ಯ, ಅಕ್ಕಿ, ರಾಗಿ ಮತ್ತು ಬಳೆಗಳಂತಹ ಸರಕುಗಳ ಮಾರಾಟಕ್ಕಾಗಿ ನಿರ್ಮಿಸಿದರು. ಕುರುಬರಪೇಟೆ, ಕುಂಬಾರ-ಪೇಟೆ, ಗಾಣಿಗರಪೇಟೆ, ಉಪ್ಪಾರಪೇಟೆ ಇತ್ಯಾದಿ ಕರಕುಶಲ ವ್ಯಾಪಾರಕ್ಕಾಗಿ ನಗರ ನಿರ್ಮಾಣ ಮಾಡಿಸಿದರು. ಹಲಸೂರುಪೇಟೆ, ಮುತ್ಯಾಲಪೇಟೆ ಹೀಗೆ ವಿಭಿನ್ನ ಮಾದರಿಯ ನಗರ ನಿರ್ಮಾಣಕ್ಕೆ ಯೋಜನೆ ರೂಪಿಸಿ ನಿರ್ಮಿಸಿದರು. ಪಟ್ಟಣಕ್ಕೆ ನೀರು ಸರಬರಾಜು ಮಾಡಲು, ಕೋಟೆಯ ಸುತ್ತಲಿನ ಕಂದಕಕ್ಕೆ ಮತ್ತು ಬೆಳೆಗಳ ರಕ್ಷಣೆಗೆ ನೀರಾವರಿಗಾಗಿ ತೊಟ್ಟಿಗಳನ್ನು ನಿರ್ಮಿಸಲು ಯೋಜನೆ ರೂಪಿಸಿದ್ದರು. ಇದು ಇಂದಿನ ಬೆಂಗಳೂರು ನಗರ ನಿರ್ಮಾಣದ ಅಡಿಪಾಯವಾಗಿದೆ. ಕರ್ನಾಟಕಕ್ಕೆ ಅದರಲ್ಲೂ ಮುಖ್ಯವಾಗಿ ಬೆಂಗಳೂರಿಗೆ ಕೆಂಪೇಗೌಡರ ಕೊಡುಗೆ ಅಪಾರ. ಬೆಂಗಳೂರು ನಿರ್ಮಾತೃ ಎಂಬ ಹೆಗ್ಗಳಿಕೆಯು ಇವರಿಗಿರುವುದರಿಂದ ಇವರನ್ನು ನಾಡಪ್ರಭು ಕೆಂಪೇಗೌಡ ಎಂದೇ ಕರೆಯಲಾಗಿದೆ. ಕೆಂಪೇಗೌಡರು ಕಲೆ ಮತ್ತು ಕಲಿಕೆಯ ಪೋಷಕರಾಗಿದ್ದರು. ಸಂಪೂರ್ಣವಾಗಿ ಕನ್ನಡ ಮಾತನಾಡುವ ಸಮುದಾಯಕ್ಕೆ ಸೇರಿದವರಾಗಿದ್ದರೂ ಅವರು ಬಹುಭಾಷಾ ಪಂಡಿತರಾಗಿದ್ದರು ಮತ್ತು ಆ ಕಾಲದ ಆಸ್ಥಾನ ಭಾಷೆಯಾದ ತೆಲುಗು ಭಾಷೆಯಲ್ಲಿ ಗಂಗಾ-ಗೌರಿವಿಲಾಸ ಎಂಬ ಯಕ್ಷಗಾನ ನಾಟಕವನ್ನು ರಚಿಸಿದರು.

**ನಿಧನ**

ಸರಿಸುಮಾರು ನಲವತ್ತಾರು ವರ್ಷಗಳ ಕಾಲ ಆಳಿದ ಕೆಂಪೇಗೌಡರು 1569 ರಲ್ಲಿ ನಿಧನರಾದರು. ಅವರ ಸಮಾಧಿಯ ಮೇಲಿನ ಹದಿನಾರನೇ ಶತಮಾನದ ಕನ್ನಡ ಶಿಲಾಶಾಸನವು ಮಾಗಡಿಯ ಕೆಂಪಾಪುರ ಎಂಬ ಹಳ್ಳಿಯಲ್ಲಿ ಅವರು ಕುಣಿಗಲ್ ನಿಂದ ಹಿಂತಿರುಗುತ್ತಿದ್ದಾಗ ವಿವಾದವನ್ನು ಪರಿಹರಿಸಿದ ನಂತರ ಸ್ಥಳದಲ್ಲೇ ಸಾವನ್ನಪ್ಪಿದರೆಂದು ಘೋಷಿಸುತ್ತದೆ ಎಂಬ ವಿಚಾರವು ಚರಿತ್ರೆಯ ಪುಟಗಳಿಂದ ತಿಳಿದು ಬರುತ್ತದೆ. 2015ರ ಮಾರ್ಚ್ 7ರಂದು ಕೆಂಪೇಗೌಡರ ಸಮಾಧಿಯು ಕೆಂಪಾಪುರದಲ್ಲಿದ್ದ ಮಾಹಿತಿಯು ಇತಿಹಾಸ ತಜ್ಞ ಪ್ರಶಾಂತ್ ಮಾರೂರ್ ಅವರಿಗೆ ಆಕಸ್ಮಿಕವಾಗಿ ಸಿಕ್ಕಿತು. ಸಮಾಧಿಗೆ ಭೇಟಿ ನೀಡಿದ ಇತಿಹಾಸಕಾರರ ಗುಂಪು ಇದನ್ನು ದೃಢೀಕರಿಸಿತು. ತನ್ನ ತಂದೆಯ ಮರಣದ ನಂತರ ಅವನ ಮಗ ಎರಡನೇ ಕೆಂಪೇಗೌಡನು ಸಮಾಧಿಯನ್ನು ನಿರ್ಮಿಸಿದನೆಂದು ನಂಬಲಾಗಿದೆ. ಕ್ರಿ.ಶ.1609 ರಲ್ಲಿ ಶಿವಗಂಗೆಯ ಗಂಗಾಧರೇಶ್ವರ ದೇವಸ್ಥಾನದಲ್ಲಿ ಲೋಹದ ಪ್ರತಿಮೆಯನ್ನು ಮರಣೋತ್ತರವಾಗಿ ಸ್ಥಾಪಿಸಲಾಯಿತು. ಕ್ರಿ.ಶ. 1969 ರಲ್ಲಿ ಕೆಂಪೇಗೌಡರ ಬೆಂಗಳೂರಿನ ಕಾರ್ಪೊರೇಷನ್ ಕಚೇರಿ ಎದುರು ಮತ್ತೊಂದು ಪ್ರತಿಮೆಯನ್ನು ಸ್ಥಾಪಿಸಲಾಯಿತು. ಬೆಂಗಳೂರಿಗೆ ನಾಡಪ್ರಭು ನೀಡಿರುವ ಕೊಡುಗೆಯನ್ನು ಸದಾಸ್ಮರಿಸಲು ರಾಜ್ಯ ಸರ್ಕಾರಗಳು ಪ್ರಮುಖ ಹೆಗ್ಗುರುತುಗಳನ್ನು ಅವರಿಗಾಗಿ ಅರ್ಪಿಸಿವೆ. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಕೆಂಪೇಗೌಡ ಬಸ್ ನಿಲ್ದಾಣ ಮತ್ತು ನಾಡಪ್ರಭು ಕೆಂಪೇಗೌಡ ಮೆಟ್ರೋ ಸ್ಟೇಷನ್ ಇವುಗಳನ್ನು ನಾವು ಬೆಂಗಳೂರಿನಲ್ಲಿ ಕಾಣಬಹುದು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಾಡಪ್ರಭು ಕೆಂಪೇಗೌಡ ಬಡಾವಣೆಯನ್ನು ಅಭಿವೃದ್ಧಿ ಪಡಿಸಿದೆ. ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ಫಿಸಿಯೋಥೆರಪಿ, ಕೆಂಪೇಗೌಡ ಕಾಲೇಜ್ ಆಫ್ ನರ್ಸಿಂಗ್ ಮತ್ತು ಕೆಂಪೇಗೌಡ ವಸತಿ ಪಿ.ಯು. ಕಾಲೇಜುಗಳಂತಹ ಶಿಕ್ಷಣ ಸಂಸ್ಥೆಗಳಿಗೆ ಕೆಂಪೇಗೌಡರ ಹೆಸರನ್ನು ಇಡಲಾಗಿದೆ. ಬೆಂಗಳೂರಿನಲ್ಲಿ ಒಂದು ಪೊಲೀಸ್ ಠಾಣೆಗೆ ಮತ್ತು ಉದ್ಯಾನವನಕ್ಕೆ ಅವರ ಸ್ಮರಣಾರ್ಥವಾಗಿ ಹೆಸರಿಡಲಾಗಿದೆ. ನಗರದಲ್ಲಿ ಜನನಿಬಿಡ ರಸ್ತೆಗೆ ಕೆಂಪೇಗೌಡ ರಸ್ತೆ ಎಂದು ಹೆಸರಿಸಲಾಗಿದೆ. 2017 ರಿಂದ, ಕರ್ನಾಟಕ ಸರ್ಕಾರವು ಕೆಂಪೇಗೌಡರ ಜನ್ಮ ವಾರ್ಷಿಕೋತ್ಸವ ಅಥವಾ ಕೆಂಪೇಗೌಡ ಜಯಂತಿಯನ್ನು ಆಚರಿಸಲು ಜೂನ್ 27ನೇ ದಿನಾಂಕವನ್ನು ಗುರುತಿಸಿದೆ ಘೋಷಿಸಿದೆ. ಬಿಬಿಎಂಪಿ ವಾರ್ಷಿಕವಾಗಿ ನೀಡುವ ನಾಗರಿಕ ಪ್ರಶಸ್ತಿಯಾದ ಕೆಂಪೇಗೌಡ ಪ್ರಶಸ್ತಿಯನ್ನು ಅವರ ನೆನಪಿಗಾಗಿ ಸ್ಥಾಪಿಸಲಾಗಿದೆ. ಇತ್ತೀಚೆಗಷ್ಟೇ 108 ಅಡಿ ಎತ್ತರದ ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆಯನ್ನು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹೆಬ್ಬಾಗಿಲಿನಲ್ಲೇ ಅನಾವರಣಗೊಳಿಸಲಾಗಿದೆ. ನಾಡಪ್ರಭು ಕೆಂಪೇಗೌಡರ ಆಡಳಿತ ವೈಖರಿ, ನಗರ ನಿರ್ಮಾಣ ಯೋಜನೆ, ಸಮಾಜ ಸುಧಾರಣೆ, ಸಾಹಿತ್ಯಕ್ಕೆ ನೀಡಿದ ಕೊಡುಗೆ, ಆರ್ಥಿಕ ಸುಧಾರಣೆ, ನೀರಾವರಿ ವ್ಯವಸ್ಥೆಯ ಸುಧಾರಣೆಗೆ ಮತ್ತು ಬೆಂಗಳೂರು ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಅವರು ಶ್ರಮಿಸಿದ ಪರಿ ಎಲ್ಲವೂ ಸದಾ ಸ್ಮರಣೀಯವಾಗಿವೆ.

**- ಕೆ.ಎನ್.ಚಿದಾನಂದ**

» ವಿಜಯನಗರದ ಗಡಿಯಲ್ಲಿ ಬಹಮನಿ ಸುಲ್ತಾನರ ಸೈನ್ಯದ ಕೋಟಲೆ ಹೆಚ್ಚಿತ್ತು. ವಿಜಯನಗರದ ಅಖಂಡತೆಯನ್ನು ಕಾಪಾಡಲು ಸದಾ ಸಿದ್ಧವಾಗಿದ್ದ ಕೆಂಪೇಗೌಡರು ತಮ್ಮ ಸೋದರ ಸೋಮೇಗೌಡ ಮತ್ತು ಬಸವೇಗೌಡರ ಜೊತೆ ಸೇರಿ ಹಲವು ಯುದ್ಧಗಳನ್ನು ಜಯಿಸುತ್ತಾರೆ. ಮೊರಸು ಒಕ್ಕಲಿಗರು ಯಲಹಂಕದಲ್ಲಿ ವಿಜಯನಗರದ ಸಾಮಂತರಾಗಿ ಆಡಳಿತ ನಡೆಸುತ್ತಿದ್ದರು. ಕೆಂಪೇಗೌಡರು ಯಲಹಂಕ ದೊರೆಗಳಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದಾರೆ. ಇವರು ತಮ್ಮ ತಂದೆಯಿಂದ ಯಲಹಂಕ ನಾಡಿನ ಅಧಿಕಾರ ಸ್ವೀಕಾರ ಮಾಡಿ ನಲವತ್ತಾರು ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದಂತಿರುವ ಪೆನುಕೊಂಡದಲ್ಲಿ ಕೆಂಪೇಗೌಡರು ಅಧಿಕಾರಕ್ಕೆ ಬರುತ್ತಾರೆ ಎಂಬ ಭಯದಿಂದ ಚನ್ನಪಟ್ಟಣದಲ್ಲಿದ್ದ ಪಕ್ಕದ ಪಾಳೆಗಾರನಾದ ಜಗದೇವರಾಯನು ವಿಜಯನಗರ ಚಕ್ರವರ್ತಿ ಸದಾಶಿವರಾಯರಿಗೆ ದೂರು ನೀಡಿದನು.

---

**“ಇಂದು ಬೆಂಗಳೂರು ವಿಶ್ವದ ಪ್ರಮುಖ ತಂತ್ರಜ್ಞಾನ ನಗರಗಳಲ್ಲಿ ಒಂದಾಗಿ ಗುರುತಿಸಿಕೂಂಡಿದೆ. ಜಾಗತೀಕರಣ, ಮಾಹಿತಿ ತಂತ್ರಜ್ಞಾನ, ಶಿಕ್ಷಣ, ವೈದ್ಯಕೀಯ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಬೆಂಗಳೂರು ಸಾಧಿಸಿರುವ ಅಸಾಧಾರಣ ಪ್ರಗತಿಯ ಹಿಂದೆ ನಾಲ್ಕು ಶತಮಾನಗಳ ಹಿಂದೆ ಕೆಂಪೇಗೌಡರು ಹಾಕಿದ ದೂರದರ್ಶಿತ್ವದ ಅಡಿಪಾಯ ಅಡಗಿದೆ.**

## ಸುಸ್ಥಿರ ಅಭಿವೃದ್ಧಿಯ ದೂರದರ್ಶಿ

ಕೆಂಪೇಗೌಡ ಜಯಂತಿ

ಇತಿಹಾಸ ಕೇವಲ ರಾಜರ, ಸಾಮ್ರಾಜ್ಯಗಳ ಮತ್ತು ಯುದ್ಧಗಳ ಕಥನವಲ್ಲ, ಅದು ಸಮಾಜವನ್ನು ರೂಪಿಸಿದ ಜನಜೀವನದ ಗುಣಮಟ್ಟವನ್ನು ಹೆಚ್ಚಿಸಿದ ಮತ್ತು ಭವಿಷ್ಯದ ಪೀಳಿಗೆಗಳ ಬದುಕಿಗೆ ದಾರಿ ದೀಪವಾದ ವ್ಯಕ್ತಿತ್ವಗಳ ದಾಖಲೆ. ಅಂತಹ ಮಹನೀಯರಲ್ಲಿ ನಾಡಪ್ರಭು ಕೆಂಪೇಗೌಡರು ಅಗ್ರಗಣ್ಯರು. ಅವರು ಕೇವಲ ಒಂದು ನಗರ ಕಟ್ಟಿದ ಆಡಳಿತಗಾರರಲ್ಲ. ಜನಪರ ಆಡಳಿತ, ಸುಸ್ಥಿರ ನಗರ ಯೋಜನೆ, ಕೃಷಿ ಅಭಿವೃದ್ಧಿ, ನೀರಾವರಿ ವ್ಯವಸ್ಥೆ, ವ್ಯಾಪಾರೋದ್ಯಮ, ಧಾರ್ಮಿಕ ಸಹಿಷ್ಣುತೆ ಮತ್ತು ಸಾಂಸ್ಕೃತಿಕ ಸಾಮರಸ್ಯದ ಪ್ರತೀಕವಾಗಿದ್ದರು.

ಇಂದು ಬೆಂಗಳೂರು ವಿಶ್ವದ ಪ್ರಮುಖ ತಂತ್ರಜ್ಞಾನ ನಗರಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ಜಾಗತೀಕರಣ, ಮಾಹಿತಿ ತಂತ್ರಜ್ಞಾನ, ಶಿಕ್ಷಣ, ವೈದ್ಯಕೀಯ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಬೆಂಗಳೂರು ಸಾಧಿಸಿರುವ ಅಸಾಧಾರಣ ಪ್ರಗತಿಯ ಹಿಂದೆ ನಾಲ್ಕು ಶತಮಾನಗಳ ಹಿಂದೆ ಕೆಂಪೇಗೌಡರು ಹಾಕಿದ ದೂರದರ್ಶಿತ್ವದ ಅಡಿಪಾಯ ಅಡಗಿದೆ. ಆ ಕಾರಣಕ್ಕಾಗಿಯೇ ಅವರನ್ನು ಬೆಂಗಳೂರು ನಿರ್ಮಾತೃ ಎಂದು ಮಾತ್ರ ಕರೆಯುವುದು. ಅವರು ಒಬ್ಬ ನಗರ ನಿರ್ಮಾತೃ, ಜನಪರ ಆಡಳಿತಗಾರ, ಪರಿಸರ ಸಂರಕ್ಷಕ, ಅಭಿವೃದ್ಧಿಯ ಹರಿಕಾರ ಮತ್ತು ಸಮಾಜಮುಖಿ ಚಿಂತಕರಾಗಿದ್ದರು.

ಕೆಂಪೇಗೌಡರ ಆರಂಭಿಕ ಜೀವನ ನಾಡಪ್ರಭು ಕೆಂಪೇಗೌಡರು ಕ್ರಿ.ಶ. 1513ರ ಸುಮಾರಿಗೆ ಯಲಹಂಕ ನಾಡಪ್ರಭು ಕುಟುಂಬದಲ್ಲಿ ಜನಿಸಿದರು. ಅವರ ತಂದೆ ಕೆಂಪ ನಂಜೇಗೌಡರು ಸ್ಥಳೀಯ ಆಡಳಿತಗಾರ. ಬಾಲ್ಯದಿಂದಲೇ ಕೆಂಪೇಗೌಡರು ಆಡಳಿತ, ಸಮಾಜಜೀವನ, ಕೃಷಿ ಮತ್ತು ಯುದ್ಧಕಲೆಗಳಲ್ಲಿ ಆಸಕ್ತ ಹೊಂದಿದ್ದರು. ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿದ್ದ ಯಲಹಂಕ ಪ್ರದೇಶದಲ್ಲಿ ಬೆಳೆದರು. ವಿಜಯನಗರದ ಆಡಳಿತ ವ್ಯವಸ್ಥೆ, ಮಾರುಕಟ್ಟೆ ವ್ಯವಸ್ಥೆ, ಕೋಟೆ ನಿರ್ಮಾಣ ಮತ್ತು ಜನಪರ ಆಡಳಿತದಿಂದ ಪ್ರಭಾವಿತರಾಗಿದ್ದರು.

ಇದೇ ಅನುಭವ ಮುಂದೆ ಬೆಂಗಳೂರಿನ ನಿರ್ಮಾಣದಲ್ಲಿ ಪ್ರತಿಫಲಿಸಿತು. ಬೆಂಗಳೂರು ಸ್ಥಾಪನೆಯ ಮೈಲಿಗಲ್ಲು ಕ್ರಿ.ಶ. 1537ರಲ್ಲಿ ಕೆಂಪೇಗೌಡರು ಬೆಂಗಳೂರನ್ನು ಸ್ಥಾಪಿಸಿದರು. ಇದು ಯೋಜಿತ ನಗರಾಭಿವೃದ್ಧಿಯ ಮಾದರಿಯಾಗಿತ್ತು. ಆ ಕಾಲದಲ್ಲಿ ಅನೇಕ ಪಟ್ಟಣಗಳು ಸಹಜವಾಗಿ ಬೆಳೆಯುತ್ತಿದ್ದವು. ಆದರೆ ಬೆಂಗಳೂರು ಪೂರ್ವಯೋಜಿತ ನಗರವಾಗಿತ್ತು. ನಗರಕ್ಕೆ ಕೋಟೆ ನಿರ್ಮಿಸಲಾಯಿತು. ಪ್ರಮುಖ ರಸ್ತೆಗಳು, ವ್ಯಾಪಾರ ಕೇಂದ್ರಗಳು, ವಸತಿ ಪ್ರದೇಶಗಳು, ದೇವಾಲಯಗಳು ಮತ್ತು ಕೆರೆಗಳನ್ನು ಸಮನ್ವಯಗೊಳಿಸಿ ನಗರ ರೂಪಿಸಲಾಯಿತು. ಇಂದು ನಗರ ಯೋಜನೆ ಎಂದು ಕರೆಯುವ ಪರಿಕಲ್ಪನೆಯನ್ನು ಕೆಂಪೇಗೌಡರು ಸುಮಾರು ಐದು ಶತಮಾನ ಹಿಂದೆ ಕಾರ್ಯರೂಪಕ್ಕೆ ತಂದಿದ್ದರು. ಕೃಷಿ ಮತ್ತು ವ್ಯಾಪಾರದ ಅಭಿವೃದ್ಧಿ, ಸುರಕ್ಷತ ವಸತಿ ವ್ಯವಸ್ಥೆ, ನೀರಿನ ನಿರ್ವಹಣೆ, ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ, ಉದ್ಯೋಗ ಸೃಷ್ಟಿ, ಜನಸಾಮಾನ್ಯರ ಜೀವನಮಟ್ಟ ಸುಧಾರಣೆ ಇವು ಬೆಂಗಳೂರು ನಿರ್ಮಾಣದ ಪ್ರಮುಖ ಉದ್ದೇಶಗಳಾಗಿದ್ದವು.

ಇಂದು ವಿಶ್ವದ ಅನೇಕ ನಗರಗಳು ಅತಿಯಾದ ಜನಸಂಖ್ಯೆ, ಟ್ರಾಫಿಕ್ ಸಮಸ್ಯೆ, ನೀರಿನ ಕೊರತೆ ಮತ್ತು ಪರಿಸರ ಹಾನಿಯಿಂದ ಬಳಲುತ್ತಿವೆ. ಆದರೆ ಕೆಂಪೇಗೌಡರು ಐದು ಶತಮಾನ ಹಿಂದೆಯೇ ಈ ಸಮಸ್ಯೆಗಳನ್ನು ಊಹಿಸಿ



ಯೋಜನೆ ರೂಪಿಸಿದ್ದರು. ಅವರು ನಗರದ ನಾಲ್ಕು ದಿಕ್ಕುಗಳಲ್ಲಿ ಗೋಪುರ ನಿರ್ಮಿಸಿ ನಗರದ ವಿಸ್ತರಣೆಯ ಮಿತಿಯನ್ನು ಗುರುತಿಸಿದರು. ಈ ಗೋಪುರಗಳು ಕೇವಲ ಸ್ಮಾರಕ ಕಟ್ಟಡಗಳಲ್ಲ; ಅವು ನಗರಾಭಿವೃದ್ಧಿಯ ನಿಯಂತ್ರಣದ ಸಂಕೇತವಾಗಿದ್ದವು. ನಗರದೊಳಗೆ ವ್ಯಾಪಾರ ಬೀದಿಗಳು, ವೃತ್ತಿಪರರ ವಸತಿ ಪ್ರದೇಶಗಳು ಮತ್ತು ಸಾರ್ವಜನಿಕ ಸ್ಥಳಗಳನ್ನು ವ್ಯವಸ್ಥಿತವಾಗಿ ರೂಪಿಸಲಾಯಿತು.

ಇಂದಿನ ಸ್ಮಾರ್ಟ್ ಸಿಟಿ ಪರಿಕಲ್ಪನೆಯ ಮೂಲ ಅಂಶಗಳಾದ ಯೋಜನೆ, ಸಂಪನ್ಮೂಲ ನಿರ್ವಹಣೆ ಮತ್ತು ನಾಗರಿಕ ಸೌಲಭ್ಯಗಳ ವ್ಯವಸ್ಥೆಯನ್ನು ಕೆಂಪೇಗೌಡರ ಆಡಳಿತದಲ್ಲಿಯೇ ಕಾಣಬಹುದು. ಕೆರೆಗಳ ನಿರ್ಮಾಣ, ಜಲಸಂರಕ್ಷಣೆ ಕೆಂಪೇಗೌಡರ ಅತ್ಯಂತ ಮಹತ್ವದ ಕೊಡುಗೆಗಳಲ್ಲಿ ಕೆರೆಗಳ ನಿರ್ಮಾಣ ಪ್ರಮುಖ. ಅವರು ಅರಿತಿದ್ದ ಒಂದು ಸತ್ಯವೇನೆಂದರೆ: ನೀರನ್ನು ಉಳಿಸಿದವನೇ ನಾಗರಿಕತೆಯನ್ನು ಉಳಿಸುತ್ತಾನೆ. ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನೇಕ ಕೆರೆಗಳನ್ನು ನಿರ್ಮಿಸಲಾಯಿತು.

ಧರ್ಮಾಂಬುಧಿ, ಸಂಪಂಗಿ, ಕೆಂಪಾಂಬುಧಿ ಸೇರಿದಂತೆ ಅನೇಕ ಜಲಾಶಯಗಳು ನಿರ್ಮಾಣಗೊಂಡವು. ಕುಡಿಯುವ ನೀರಿನ ಪೂರೈಕೆ, ಕೃಷಿಗೆ ನೀರಾವರಿ, ಅಂತರ್ಜಲ ಮರುಪೂರಣ, ಪರಿಸರ ಸಮತೋಲನ, ಪಶುಸಂಗೋಪನೆ ಇವು ಕೆರೆಗಳ ಉದ್ದೇಶವಾಗಿತ್ತು. ಇಂದು ಬೆಂಗಳೂರು ನೀರಿನ ಕೊರತೆ ಎದುರಿಸುತ್ತಿರುವ ಸಂದರ್ಭದಲ್ಲಿ ಕೆಂಪೇಗೌಡರ ಜಲಸಂರಕ್ಷಣೆಯ ಮಾದರಿ ಅತ್ಯಂತ ಪ್ರಸ್ತುತ. ಕೆಂಪೇಗೌಡರು ಕೃಷಿಯನ್ನು ಆರ್ಥಿಕತೆಯ ಬೆನ್ನೆಲುಬು ಎಂದು ಪರಿಗಣಿಸಿದ್ದರು. ಆಗಾಗ್ಗೆ ಕೆರೆಗಳನ್ನು ನಿರ್ಮಿಸಿದರು. ಕೃಷಿಭೂಮಿಯನ್ನು ವಿಸ್ತರಿಸಿದರು, ರೈತರಿಗೆ ಭೂಹಕ್ಕುಗಳನ್ನು ಒದಗಿಸಿದರು. ಮಾರುಕಟ್ಟೆ ವ್ಯವಸ್ಥೆ ಅಭಿವೃದ್ಧಿಪಡಿಸಿದರು. ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸುವ ಮೂಲಕ ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸಿದರು. ರೈತರ ಶ್ರಮಕ್ಕೆ ನ್ಯಾಯಯುತ ಮೌಲ್ಯ ದೊರಕುವ ವ್ಯವಸ್ಥೆಯನ್ನು ರೂಪಿಸಿದರು. ಆರ್ಥಿಕ ಅಭಿವೃದ್ಧಿಯ ಹರಿಕಾರ ಬೆಂಗಳೂರು ಬೆಳವಣಿಗೆಯಲ್ಲಿ ವ್ಯಾಪಾರ ಪ್ರಮುಖ ಪಾತ್ರವಹಿಸಿತು.

ಕೆಂಪೇಗೌಡರು ಮಾರುಕಟ್ಟೆಗಳನ್ನು ಸ್ಥಾಪಿಸಿದರು. ವ್ಯಾಪಾರಿಗಳಿಗೆ ಭದ್ರತೆ ಒದಗಿಸಿದರು. ವಿವಿಧ ಪ್ರದೇಶಗಳ ಜನರನ್ನು ನೆಲೆಸಲು ಪ್ರೋತ್ಸಾಹಿಸಿದರು. ಕೈಗಾರಿಕೆ ಮತ್ತು ಕೌಶಲ್ಯಾಧಾರಿತ ವೃತ್ತಿಗಳಿಗೆ ಉತ್ತೇಜನ ನೀಡಿದರು. ಪರಿಣಾಮವಾಗಿ ಬೆಂಗಳೂರು ವ್ಯಾಪಾರ ಕೇಂದ್ರವಾಗಿ ಬೆಳೆಯತೊಡಗಿತು. ಇಂದಿನ ಜಾಗತಿಕ ಹೂಡಿಕೆಗಳು ಮತ್ತು ಕೈಗಾರಿಕಾ ಬೆಳವಣಿಗೆಗೆ ಅಡಿಪಾಯ ಹಾಕಿದ ಮೊದಲ ಆಡಳಿತಗಾರರಲ್ಲಿ ಕೆಂಪೇಗೌಡರು ಒಬ್ಬರು. ಕೆಂಪೇಗೌಡರು ಧರ್ಮದ ಆಧಾರದ ಮೇಲೆ ಜನರನ್ನು ವಿಭಜಿಸಲಿಲ್ಲ. ದೇವಾಲಯಗಳ ನಿರ್ಮಾಣಕ್ಕೆ ನೆರವಾದರು. ವಿವಿಧ ಸಮುದಾಯಗಳೊಂದಿಗೆ ಉತ್ತಮ ಸಂಬಂಧ ಹೊಂದಿದ್ದರು. ಸಾಮಾಜಿಕ ಸಾಮರಸ್ಯಕ್ಕೆ ಆದ್ಯತೆ ನೀಡಿದರು. ಅವರ ಆಡಳಿತದಲ್ಲಿ ಧರ್ಮ, ಜಾತಿ ಮತ್ತು ವೃತ್ತಿಯ ಆಧಾರದ ಮೇಲೆ ದ್ವೇಷಕ್ಕಿಂತ ಸಹಬಾಳ್ವೆಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿತ್ತು.

ಇಂದಿನ ಭಾರತದಲ್ಲಿ ಸಾಮಾಜಿಕ ಸಾಮರಸ್ಯದ ಅಗತ್ಯ ಹೆಚ್ಚುತ್ತಿರುವ ಸಂದರ್ಭದಲ್ಲಿ ಕೆಂಪೇಗೌಡರ ಈ ದೃಷ್ಟಿಕೋನ ಪ್ರಸ್ತುತವಾಗಿದೆ. ಕೆಂಪೇಗೌಡರ ಆಡಳಿತ ತತ್ವಗಳು ಒಬ್ಬ ಆಡಳಿತಗಾರನ ಯಶಸ್ಸು ಅವನ ಅಧಿಕಾರದಲ್ಲಲ್ಲ ಜನರ ವಿಶ್ವಾಸದಲ್ಲಿ ಅಡಗಿರುತ್ತದೆ. ಕೆಂಪೇಗೌಡರ ಆಡಳಿತದ ಪ್ರಮುಖ ಲಕ್ಷಣಗಳು ಎಂದರೆ ಜನಪರತೆ. ಜನರ ಅಗತ್ಯಗಳನ್ನು ಅರ್ಥ ಮಾಡಿಕೊಂಡು ಆಡಳಿತ ನಡೆಸಿದರು. ಅಭಿವೃದ್ಧಿ ಕೇಂದ್ರಿತ ಆಡಳಿತ, ಸಾರ್ವಜನಿಕ ಮೂಲಸೌಕರ್ಯಗಳ ನಿರ್ಮಾಣಕ್ಕೆ ಆದ್ಯತೆ ನೀಡಿದರು. ಕೆರೆಗಳು, ತೋಟಗಳು ಮತ್ತು ಹಸಿರು ಪ್ರದೇಶಗಳನ್ನು ಅಭಿವೃದ್ಧಿಪಡಿಸಿದರು. ಆರ್ಥಿಕ ಸ್ವಾವಲಂಬನೆ, ಕೃಷಿ ಮತ್ತು ವ್ಯಾಪಾರಕ್ಕೆ ಉತ್ತೇಜನ ನೀಡಿದರು.



ಎಲ್ಲ ವರ್ಗದ ಜನರನ್ನು ಒಳಗೊಂಡ ಆಡಳಿತ ನಡೆಸಿದರು. ಆಧುನಿಕ ಬೆಂಗಳೂರಿನ ಮೇಲೆ ಪ್ರಭಾವ ಇಂದು ಬೆಂಗಳೂರು ಭಾರತದ ಐಟಿ ರಾಜಧಾನಿ. ಜಾಗತಿಕ ಹೂಡಿಕೆ ಕೇಂದ್ರ, ಶಿಕ್ಷಣ ಮತ್ತು ಸಂಶೋಧನೆಯ ಪ್ರಮುಖ ತಾಣ. ಬಹುಸಾಂಸ್ಕೃತಿಕ ನಗರ. ಈ ಬೆಳವಣಿಗೆಯ ಹಿಂದೆ ಕೆಂಪೇಗೌಡರ ದೂರದೃಷ್ಟಿಯಿದೆ. ಅವರು ನಿರ್ಮಿಸಿದ ನಗರ ಕಾಲಕ್ರಮೇಣ ಬ್ರಿಟಿಷರ ಕಾಲದಲ್ಲಿ ಕಂಟೋನ್ಮೆಂಟ್ ಆಗಿ, ಸ್ವಾತಂತ್ರ್ಯ ನಂತರ ಕೈಗಾರಿಕಾ ಕೇಂದ್ರವಾಗಿ ಮತ್ತು ನಂತರ ಐಟಿ ನಗರವಾಗಿ ರೂಪುಗೊಂಡಿತು.

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ 2022ರಲ್ಲಿ ಸ್ಥಾಪಿಸಲಾದ 108 ಅಡಿ ಎತ್ತರದ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಕೇವಲ ಒಂದು ಶಿಲ್ಪವಲ್ಲ; ಅದು ಕನ್ನಡ ನಾಡಿನ ಐತಿಹಾಸಿಕ ಸ್ಮೃತಿಗೆ ಸಲ್ಲಿಸಿದ ಗೌರವ. ಸ್ಟ್ಯಾಚು ಆಫ್ ಪ್ರಾಸ್ಪರಿಟಿ ಎಂದು ಕರೆಯಲ್ಪಡುವ ಈ ಪ್ರತಿಮೆ ವಿಶ್ವದ ಅತಿ ಎತ್ತರದ ಕಂಚಿನ ಪ್ರತಿಮೆಗಳಲ್ಲಿ ಒಂದು.

ಬೆಂಗಳೂರಿಗೆ ಆಗಮಿಸುವ ದೇಶ-ವಿದೇಶಗಳ ಜನರಿಗೆ ಇದು ನಗರದ ಇತಿಹಾಸ, ಸಂಸ್ಕೃತಿ ಮತ್ತು ನಿರ್ಮಾತೃವನ್ನು ನೆನಪಿಸುತ್ತದೆ. ಆಧುನಿಕತೆಯತ್ತ ಸಾಗುವಾಗ ನಮ್ಮ ಇತಿಹಾಸ ಮರೆಯಬಾರದು ಎಂಬ ಸಂದೇಶ ನೀಡುತ್ತದೆ. ಇತ್ತೀಚೆಗೆ ಕರ್ನಾಟಕ ಸರಕಾರ ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸಿ, ಕೆಂಪೇಗೌಡ ಜಯಂತಿಗೆ ಮಹತ್ವ ನೀಡುತ್ತಿರುವುದು ಅವರ ಪರಂಪರೆಯ ಮರುಪರಿಶೀಲನೆಯ ಸಂಕೇತ. ಅವರ ಚಿಂತನೆಗಳು ಮತ್ತು ಆಡಳಿತದ ಮಾದರಿ ಇಂದಿನ ನಗರೀಕರಣ, ಪರಿಸರ ಸಮಸ್ಯೆಗಳು, ಸಾಮಾಜಿಕ ಅಸಮಾನತೆ ಮತ್ತು ಅಭಿವೃದ್ಧಿಯ ಸವಾಲುಗಳಿಗೆ ಉತ್ತರಗಳನ್ನು ಒದಗಿಸುತ್ತವೆ. ಇವು ಅವರ ಅಭಿವೃದ್ಧಿ ಮಾದರಿಯನ್ನು ಪುನರುಜ್ಜೀವನಗೊಳಿಸುವ ಪ್ರಯತ್ನ. ಇಂದಿಗೆ ಕೆಂಪೇಗೌಡರ ಸಂದೇಶ ಕೆಂಪೇಗೌಡರ ಜೀವನದಿಂದ ಕಲಿಯಬಹುದಾದ ಪ್ರಮುಖ ಪಾಠಗಳು- ನೀರನ್ನು ಉಳಿಸಬೇಕು, ಕೆರೆಗಳ ಸಂರಕ್ಷಣೆ ಅತ್ಯಗತ್ಯ. ಅನಿಯಂತ್ರಿತ ನಗರೀಕರಣ ತಡೆಯಬೇಕು. ಅಭಿವೃದ್ಧಿ ಮತ್ತು ಪರಿಸರದ ನಡುವೆ ಸಮತೋಲನ ಇರಬೇಕು. ಧರ್ಮ, ಜಾತಿ ಮತ್ತು ಭಾಷೆಗಳ ವೈವಿಧ್ಯತೆಯನ್ನು ಗೌರವಿಸಬೇಕು.

ಅಭಿವೃದ್ಧಿಯ ಫಲ ಎಲ್ಲರಿಗೂ ತಲುಪಬೇಕು. ನಾಡಪ್ರಭು ಕೆಂಪೇಗೌಡರನ್ನು ಕೇವಲ ಬೆಂಗಳೂರಿನ ಸಂಸ್ಥಾಪಕ ಎಂದು ನೆನಪಿಸುವುದು ಅವರ ವ್ಯಕ್ತಿತ್ವದ ವಿಶಾಲತೆಯನ್ನು ಕುಗ್ಗಿಸಿದಂತೆ. ಅವರು ದೂರದರ್ಶಿ ನಗರ ಯೋಜಕ, ಪರಿಸರ ಸಂರಕ್ಷಕ, ಜನಪರ ಆಡಳಿತಗಾರ, ಕೃಷಿ ಮತ್ತು ವ್ಯಾಪಾರ ಅಭಿವೃದ್ಧಿಯ ಹರಿಕಾರ ಹಾಗೂ ಸಾಮಾಜಿಕ ಸಾಮರಸ್ಯದ ಪ್ರತಿಪಾದಕ. ಇಂದು ಬೆಂಗಳೂರು ವಿಶ್ವನಗರವಾಗಿ ಬೆಳೆದಿದ್ದರೆ ಅದರ ಬೀಜ ಬಿತ್ತಿದವರು ಕೆಂಪೇಗೌಡರು. ಅವರ ಚಿಂತನೆಗಳು ಇಂದಿನ ನಗರಾಭಿವೃದ್ಧಿ, ನೀರಿನ ನಿರ್ವಹಣೆ, ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ಸಾಮರಸ್ಯಕ್ಕೆ ಮಾರ್ಗದರ್ಶಿ.

**- ಬಸವರಾಜ್** ಕನ್ನಾಳೆ

---

## ಭಾರತದ ಮೇಲೂ ಪರಿಣಾಮ ಬೀರಿದ ವೆನೆಜುವೆಲಾ ಭೂಕಂಪ

**ತೈಲ ಪೂರೈಕೆಯಲ್ಲಿ ವ್ಯತ್ಯಯ | ಅನಿಶ್ಚಿತತೆ ಸೃಷ್ಟಿಸಿದ ಕಂಪನ**



**ನವದೆಹಲಿ:** ವೆನೆಜುವೆಲಾದಲ್ಲಿ ಸಂಭವಿಸಿದ ಪ್ರಬಲ ಭೂಕಂಪಗಳಿಂದಾಗಿ ಇಡೀ ದೇಶ ನಲುಗಿ ಹೋಗಿದ್ದು, ಅದರ ಪರಿಣಾಮ ಭಾರತದ ತೈಲ ಆಮದಿನ ಮೇಲೂ ಬೀರಲಿದೆ ಎಂದು ವರದಿ ತಿಳಿಸಿದೆ.

ಹಡಗು ವಿಳಂಬ, ಬಂದರುಗಳಲ್ಲಿ ಕಾರ್ಯಾಚರಣೆಗೆ ತೊಡಕಾಗಬಹುದು ಎಂದು ಕೈಗಾರಿಕಾ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಜೂ.24ರ ಸಂಜೆ 7.2 ಮತ್ತು 7.5 ತೀವ್ರತೆಯ ಎರಡು ಭೂಕಂಪ ಸಂಭವಿಸಿದ್ದು, 125 ವರ್ಷಗಳಲ್ಲೇ ವೆನೆಜುವೆಲಾದಲ್ಲಿ ಸಂಭವಿಸಿದ ವಿನಾಶಕಾರಿ ಭೂಕಂಪ ಇದಾಗಿದೆ. ನೂರಾರು ಮಂದಿ ಮೃತಪಟ್ಟು, ಸಾವಿರಾರು ಮಂದಿ ಗಾಯಗೊಂಡಿದ್ದಾರೆಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ನಡುವೆ ಪಶ್ಚಾತ್ ಕಂಪನಗಳು ಮುಂದುವರಿದಿದ್ದು ಅಲ್ಲಿನ ಜನರನ್ನು ಕಂಗೆಡಿಸಿದೆ. ಅತ್ಯಂತ ಸೂಕ್ಷ್ಮ ಸಂದರ್ಭದಲ್ಲಿ ಈ ವಿನಾಶಕಾರಿ ಭೂಕಂಪ ಸಂಭವಿಸಿದ್ದು, ಭಾರತದ ಮೇಲೂ ಪರಿಣಾಮ ಬೀರಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಅಮೇರಿಕಾ ಮತ್ತು ಇರಾನ್ ನಡುವಿನ ಯುದ್ಧದ ಹಿನ್ನಲೆಯಲ್ಲಿ ಹೊರ್ಮುಜ್ ಜಲಸಂಧಿ ಮುಚ್ಚಿದ್ದರಿಂದ ಭಾರತವು ತೈಲ ಸರಬ ರಾಜಿನಲ್ಲಿ ಭಾರಿ ವ್ಯತ್ಯಯ ಕಂಡಿದೆ. ಕೆಲ ದಿನಗಳ ಹಿಂದೆ ಶಾಂತಿ ಒಪ್ಪಂದವಾಗಿ ಹೊರ್ಮುಜ್ ಜಲಸಂಧಿಯನ್ನು ತೆರೆದಿರುವುದರಿಂದ ತೈಲ ಸರಬರಾಜು ಸಹಜ ಸ್ಥಿತಿಗೆ ಮರಳುತ್ತಿರುವ ಸಂದರ್ಭದಲ್ಲೇ ವೆನೆಜುವೆಲಾ ದುರಂತವು ಭಾರತಕ್ಕೆ ತಲೆನೋವಾಗಿದೆ.

ವೆನೆಜುವೆಲಾ ಇತ್ತೀಚೆಗೆ ಭಾರತೀಯ ಸಂಸ್ಕರಣಾಗಾರಗಳಿಗೆ ಕಚ್ಚಾ ತೈಲ ಸರಬರಾಜಿನ ಪ್ರಮುಖ ಮೂಲವಾಗಿ ಹೊರಹೊಮ್ಮಿದೆ. ದೇಶದ ರಫ್ತು ಮೂಲಸೌಕರ್ಯದಲ್ಲಿನ ಯಾವ ಅಡಚಣೆಯು ಅದರ ಗಡಿಗಳನ್ನು ಮೀರಿದ ಪರಿಣಾಮಗಳನ್ನು ಉಂಟುಮಾಡಬಹುದೆಂದು ಇಡಿಎಂಇ ಇನ್ಶುರೆನ್ಸ್ ಬ್ರೋಕರ್ಸ್ ಲಿಮಿಟೆಡ್‌ನ ಮರುವಿಮೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಜಾಗತಿಕ ಮುಖ್ಯಸ್ಥ ವ್ಯವಸ್ಥಾಪಕ ನಿರ್ದೇಶಕ ಖನ್ನಾ ಹೇಳಿದ್ದಾರೆ.

**ಭಾರತಕ್ಕೆ ವೆನೆಜುವೆಲಾ ತೈಲ ಸರಬರಾಜು**

ಪಶ್ಚಿಮ ಏಷ್ಯಾದಲ್ಲಿ ಅನಿಶ್ಚಿತತೆ ತಲೆದೋರಿದ್ದರಿಂದ ಭಾರತವು ಕೆಲ ತಿಂಗಳುಗಳಿಂದ ವಿವಿಧ ದೇಶಗಳಿಂದ ತೈಲ ಆಮದನ್ನುಹೆಚ್ಚಿಸಿದೆ. ಅಂತೆಯೇ ಹೊಸ ಮೂಲಗಳನ್ನೂ ಹುಡುಕುತ್ತಿದೆ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ವೆನೆಜುವೆಲಾ ತೈಲ ಆಮದು ಭಾರೀ ಪ್ರಮಾಣದಲ್ಲಿ ಹೆಚ್ಚಿದ್ದು, ಭಾರತಕ್ಕೆ ತೈಲ ಪೂರೈಸುವ ಪ್ರಮುಖ ದೇಶಗಳಲ್ಲಿ ಒಂದಾಗಿದೆ. ವೆನೆಜುವೆಲಾವು ಭಾರತದ ನಾಲ್ಕನೇ ಅತಿದೊಡ್ಡ ತೈಲ ಆಮದು ದೇಶವಾಗಿದ್ದು, ಮೇ ತಿಂಗಳಲ್ಲಿ ನಿತ್ಯ 2,09,000 ಬ್ಯಾರೆಲ್ ಆಮದು ಮಾಡಿಕೊಳ್ಳಲಾಗಿದೆ. ಈಗ ವೆನೆಜುವೆಲಾದಲ್ಲಿ ಸಂಭವಿಸಿದ ಭೂಕಂಪದ ಹೊಡೆತದಿಂದ ಅಲ್ಲಿನ ತೈಲಾಗಾರಗಳು, ರಫ್ತು ಟರ್ಮಿನಲ್‌ಗಳು ಪಾರಾಗಿವೆ. ಆದರೂ ಬಂದರು, ತೈಲಾಗಾರ ಸಂಬಂಧಿತ ಕೆಲ ವ್ಯವಸ್ಥೆಗಳಿಗೆ ಆಗಿರುವ ಹಾನಿಯೂ ಈಗಲೂ ತೈಲ ಸರಬರಾಜಿನ ಮೇಲೆ ಪರಿಣಾಮ ಬೀರಲಿದೆ.

ವಿದ್ಯುತ್ ವ್ಯತ್ಯಯ, ಸಾರಿಗೆ ಸಂಪರ್ಕಕ್ಕೆ ಹೊಡೆತ ಮತ್ತು ಬಂದರುಗಳಲ್ಲಿ ತುರ್ತು ನಿರ್ಬಂಧಗಳು ಕಾರ್ಗೋ ಹಡಗುಗಳ ಸಂಚಾರಕ್ಕೆ ಹಲವು ದಿನಗಳವರೆಗೆ ಅಥವಾ ಕೆಲ ವಾರಗಳ ವರೆಗೆ ತೊಡಕಾಗಬಹುದು. ವೆನೆಜುವೆಲಾದಿಂದ ತೈಲ ಸರಬರಾಜಿನ ಪ್ರಮುಖ ನಗರವಾದ ಗುಯೆರಾದಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾಗಿದ್ದು, ಸಾವಿನ ಸಂಖ್ಯೆ ಹೆಚ್ಚುತ್ತಲೇ ಇದೆ. ಹಲವು ಕಟ್ಟಡಗಳು ನೆಲಕ್ಕುರುಳಿವೆ. ರಸ್ತೆ ಮತ್ತು ವಿದ್ಯುತ್ ಸಂಪರ್ಕದಲ್ಲಿ ಏರುಪೇರಾಗಿದ್ದು, ಶಿಪ್ಪಿಂಗ್ ಶೆಡ್ಯೂಲ್ ಮತ್ತು ಬಂದರು ಕಾರ್ಯಾಚರಣೆಗಳಿಗೆ ತೊಡಕಾಗುತ್ತಿದೆ. ಟ್ಯಾಂಕರ್ ಕಾರ್ಯಾಚರಣೆ ವಿಳಂಬವಾದರೆ ಸಹಜವಾಗಿಯೇ ವೆಚ್ಚ ಹೆಚ್ಚಾಗಲಿದೆ.

# ಕಠಿಣ ಅಭ್ಯಾಸದಿಂದ ಗುರಿ ಮುಟ್ಟಲು ಸಾಧ್ಯ

## ನಿರಂತರ ಅಭ್ಯಾಸದಿಂದ ಸಾಧನೆ ಮಾಡುವುದು ಕಷ್ಟವೇನಲ್ಲ: ತಹಶೀಲ್ದಾರ್ ಶಂಕರಪ್ಪ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಕ್ಕಳು ವಿದ್ಯಾರ್ಥಿ ದಿಸೆಯಲ್ಲಿ ನಿರಂತರ ಅಭ್ಯಾಸ, ಶ್ರಮ ಹಾಕುವುದನ್ನು ಕಲಿಯಬೇಕು. ಇದರಿಂದ ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯ ಎಂದು ತಹಶೀಲ್ದಾರ್ ಜಿ.ಎಸ್.ಶಂಕರಪ್ಪ ಅವರು ಹೇಳಿದರು.



ಪಟ್ಟಣದ ನವೋದಯ ವಿದ್ಯಾ ಸಂಘದ ವಿವಿಧ ಹಂತದ ಶಾಲೆಗಳ ವಿದ್ಯಾರ್ಥಿಗಳ ಸಾಂಸ್ಕೃತಿಕ ಸಂಘಗಳ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಓದುವ ಕುರಿತು ಧೃಡ ಸಂಕಲ್ಪ ಮಾಡಿ ನಿರಂತರ ಅಭ್ಯಾಸದಿಂದ ಸಾಗಿದರೆ ಸಾಧನೆ ಮಾಡಲು ಕಷ್ಟ ಎನ್ನುವುದು ಇರುವುದಿಲ್ಲ, ಗ್ರಾಮೀಣ ಭಾಗದ ಮಕ್ಕಳು ಇಂದು ಎಲ್ಲಾ ಕ್ಷೇತ್ರದಲ್ಲಿ ದೊಡ್ಡ ಸಾಧನೆ ಮಾಡಿದ್ದಾರೆ ಎಂದು ತಿಳಿಸಿದರು.

ನಾವು ಗ್ರಾಮೀಣ ಭಾಗದವರು ಎಂಬ ಕೀಳರಿಮೆ ಬೇಡ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದು ಕಷ್ಟ ಎಂಬ ಮನಸ್ಥಿತಿ ಬೇಡ, ಎಲ್ಲರಲ್ಲೂ ಸಾಮಾರ್ಥ್ಯ ಇರುತ್ತೆ ಅದನ್ನು ಹೊರಹಾಕಲು ಆಯ್ದುಕೊಂಡ ಕ್ಷೇತ್ರದಲ್ಲಿ ಸತತ ಅಧ್ಯಯನ ಮುಖ್ಯ. ಕಲಿಕಾ ಹಂತದಲ್ಲಿ ಮೊಬೈಲ್‌ನಿಂದ ದೂರವಿರಬೇಕು. ಫೇಸ್‌ಬುಕ್, ಇನ್‌ಸ್ಟಾಗ್ರಾಂಗೆ ಬ್ರೇಕ್ ಹಾಕಬೇಕೆಂದರಲ್ಲದೆ, ಯಾವುದಾದರೂ ಆಚಲವಾದ ನಿರ್ಧಾರ ಮಾಡಬೇಕು ಎಂದು ಅವರು ಕಿವಿಮಾತು ಹೇಳಿದರು.

ನಿಮ್ಮ ಉತ್ತಮ ಭವಿಷ್ಯಕ್ಕಾಗಿ ನವೋದಯ ವಿದ್ಯಾಸಂಘದ ಅಧ್ಯಕ್ಷರು, ಆಡಳಿತ ಮಂಡಳಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಉತ್ತಮವಾದ ಶಿಕ್ಷಕರು, ಉಪನ್ಯಾಸಕರು, ಗುಣಮಟ್ಟದ ಪ್ರಯೋಗಾಲಯ, ಸುಸಜ್ಜಿತ ಕಟ್ಟಡ ಸೇರಿ ಶ್ರೇಷ್ಠಮಟ್ಟದ ಸೌಲಭ್ಯ ಕಲ್ಪಿಸಿದ್ದಾರೆ. ಇದರ ಸದುಪಯೋಗಕ್ಕೆ ವಿದ್ಯಾರ್ಥಿಗಳು ಮುಂದಾಗಬೇಕೆಂದರು.

ವಿದ್ಯಾರ್ಥಿಗಳು ಮೊಬೈಲ್‌ಗಳು ಹಾಗೂ ಟಿ.ವಿ. ಧಾರಾವಾಹಿಗಳಿಗೆ ದಾಸರಾಗದೆ ಕಷ್ಟಪಟ್ಟು ಓದಿದರೆ ಮುಂದಿನ ಭವಿಷ್ಯ ಉಜ್ವಲವಾಗಿರುತ್ತದೆ ಎಂದು ಅವರು ತಿಳಿಸಿದರು.

ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಆರ್.ಕೆ. ಶಿವಪ್ಪ ಅವರು ಮಾತನಾಡಿ, ಸ್ವಾತಂತ್ರ ಪೂರ್ವದಿಂದಲ್ಲೂ ತಾಲ್ಲೂಕಿನ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕಾರಣವಾಗಿರುವ ಸಂಸ್ಥೆಯಲ್ಲಿ ನಿಮ್ಮ ಕಲಿಕೆ ಶ್ರೇಷ್ಠವಾದದ್ದು, ಸಂಸ್ಥೆ ಮಕ್ಕಳ ಭವಿಷ್ಯಕ್ಕಾಗಿ ಶ್ರಮಿಸುತ್ತಿದ್ದು, ಇವರ ಶ್ರಮ ಸಾರ್ಥಕತೆಯಾಗಬೇಕಾದರೇ ಮಕ್ಕಳು ಉತ್ತಮ ಅಂಕ ಗಳಿಕೆಗೆ ಮುಂದಾಗಬೇಕೆಂದು ಅವರು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ನವೋದಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 40 ವರ್ಷಗಳ ಕಾಲ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಸರಸ್ವತಿ ಮತ್ತು ಪ್ರಯೋಗ ಶಾಲಾ ಸಹಾಯಕರಾದ ವೈಕುಂಠಮೂರ್ತಿ ಅವರನ್ನು ಗೌರವಿಸಲಾಯಿತು.

ಸಮಾರಂಭದಲ್ಲಿ ನವೋದಯ ವಿದ್ಯಾಸಂಘದ ಅಧ್ಯಕ್ಷ ಸಿ.ಜೆ. ಮಂಜುನಾಥ್, ಗೌರವಾಧ್ಯಕ್ಷ ಡಾ.ಸಿ.ಎಸ್.ಶೇಷಶಯನ, ಕಾರ್ಯದರ್ಶಿ ಕೆ.ಪಿ.ಶರತ್, ನಿರ್ದೇಶಕರಾದ ಜಲೇಂದ್ರಕುಮಾರ್, ಡಾ. ಪ್ರಮೋದ್, ಆನಂದ್ ಕಾಳೇನಹಳ್ಳಿ, ಗನ್ನಿ ಗಿರೀಶ್, ಶಿವಕುಮಾರ್, ಓ.ಆರ್.ರಂಗೇಗೌಡ, ಪ್ರಾಂಶುಪಾಲ ಎ.ಟಿ.ಸಂಜಯ್ ಕುಮಾರ್, ಮುಖ್ಯ ಶಿಕ್ಷಕರಾದ ಎಸ್.ಸಿ.ಸುರೇಶ್, ಸೀತಾರಾಂ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಜೂ.29ಕ್ಕೆ ರೈತರ ಕುಂದು-ಕೊರತೆ ಸಭೆ

**ಹಾಸನ:** ತಾಲ್ಲೂಕು ವ್ಯಾಪ್ತಿಯ ಎಲ್ಲಾ ರೈತಾಪಿ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ದೊರೆಯಬೇಕಾದ ಸೌಲಭ್ಯಗಳು ನಿಗಧಿತ ಅವಧಿಯೊಳಗೆ ದೊರೆಯದೆ ಇದ್ದಾಗ ತಮ್ಮ ಅಹವಾಲನ್ನು ಸಲ್ಲಿಸಲು ಸಮಸ್ಯೆಗಳ ಪರಿಹಾರಕ್ಕಾಗಿ ನೇರವಾಗಿ ತಮ್ಮ ಅಹವಾಲನ್ನು ಸ್ವೀಕರಿಸಲು ತಾಲ್ಲೂಕು ಮಟ್ಟದ ಅಧಿಕಾರಿಗಳು ಒಂದೆಡೆ ಇರುವುದರಿಂದ ಸಮಸ್ಯೆಗಳ ಪರಿಹಾರಕ್ಕಾಗಿ ನೇರವಾಗಿ ಅಹವಾಲನ್ನು ದಾಖಲಿಸಲು ತಾಲ್ಲೂಕು, ಮಟ್ಟದಲ್ಲಿ ಜೂ.29 ರಂದು ಬೆಳಿಗ್ಗೆ 11 ಗಂಟೆಗೆ ಹಾಸನ ತಾಲ್ಲೂಕು ಕಚೇರಿಯಲ್ಲಿ ರೈತರ ಕುಂದುಕೊರತೆ ಸಭೆಯನ್ನು ಆಯೋಜಿಸಲಾಗಿದೆ.

ಸಾರ್ವಜನಿಕರು ಖುದ್ದು ಹಾಜರಾಗಿ ತಮ್ಮ ಅಹವಾಲನ್ನು ಸಲ್ಲಿಸುವಂತೆ ಹಾಸನ ತಾಲ್ಲೂಕು ತಹಸೀಲ್ದಾರ್ ಅವರು ತಿಳಿಸಿದ್ದಾರೆ.

## ಜನಸ್ಪಂದನಾ ಸಭೆ

**ಹೊಳೆನರಸೀಪುರ: ಶಾಸಕ ಹೆಚ್.ಡಿ. ರೇವಣ್ಣ ರವರು ಜು.1 ರಿಂದ 8 ರ ವರೆಗೆ ದುದ್ದ ಹೋಬಳಿ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ ಗ್ರಾಮಗಳಲ್ಲಿ ಸಾರ್ವಜನಿಕರ ಕುಂದುಕೊರತೆ ಹಾಗೂ ಜನಸ್ಪಂದನಾ ಸಭೆಯನ್ನು ನಡೆಸಲಿದ್ದಾರೆ.**

## ಟೌನ್‌ಶಿಪ್‌ಗಾಗಿ ರೈತರ ಒಕ್ಕಲೆಬ್ಬಿಸುವುದಿಲ್ಲ

» ಮೊದಲನೇ ಪುಟದಿಂದ

ಶಿಪ್ ವಿರೋಧಿಸಿ 470ಕ್ಕೂ ಹೆಚ್ಚು ದಿನಗಳಿಂದಲೂ ಪ್ರತಿಭಟನೆ ನಡೆಸುತ್ತಿದ್ದಾರೆ. ರೈತರು ಭೂಸ್ವಾಧೀನ ಬೇಡ ಎಂದು ಹೇಳುತ್ತಿದ್ದಾರೆ. ಅವರ ಅಹವಾಲಿಗೆ ಸ್ಪಂದಿಸಿ ಬೆಂಬಲ ನೀಡಿದ್ದೇನೆ. ಈ ವಿಚಾರದಲ್ಲಿ ಯಾವುದೇ ಪ್ರತಿಷ್ಠೆ ಇಲ್ಲ. ರೈತರು ಒಪ್ಪಿದರೆ ನಮ್ಮ ತಕರಾರು ಏನೂ ಇಲ್ಲ. ಯೋಜನೆ ಅನುಷ್ಠಾನ ಮಾಡಬಹುದು. ರೈತರನ್ನು ಹೆದರಿಸಿ ಭೂಸ್ವಾಧೀನ ಮಾಡಬಾರದು. ಪ್ರೀತಿಯಿಂದ ಅವರ ಮನ ಗೆಲ್ಲಬೇಕು. ಬಹುತೇಕ ರೈತರ ವಿರೋಧವಿದ್ದಾಗ ಹಠ ಹಿಡಿದು ಏಕೆ ಟೌನ್‌ಶಿಪ್ ಅನುಷ್ಠಾನ ಮಾಡಬೇಕೆಂದು ಪ್ರಶ್ನಿಸಿದರು.

ಭೈರಮಂಗಲದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗುವುದಾದರೆ ರೈತರನ್ನೇ ವಿಧಾನಸೌಧಕ್ಕೆ ಕರೆಸಿಕೊಳ್ಳಲಿ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಅವರ ಹೇಳಿಕೆಗೆ ತಿರುಗೇಟು ನೀಡಿದ ಅವರು, 2006-07 ರಲ್ಲಿ ನಾನು ಮುಖ್ಯಮಂತ್ರಿಯಾಗಿದ್ದಾಗ ಮುಖ್ಯಮಂತ್ರಿ ಗೃಹಕಚೇರಿ ಕೃಷ್ಣಾಗೆ 500 ರಿಂದ 600 ರೈತರನ್ನು ಕರೆಸಿಕೊಂಡು 3 ಸಭೆಗಳನ್ನು ಮಾಡಿದ್ದೇನೆ. ಆ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕರು ಟೌನ್‌ಶಿಪ್ ವಿರೋಧಿಸಿ ವಿಧಾನಸಭೆಯಲ್ಲಿ ಏನೇನು ಮಾಡಿದ್ದಾರೋ ಎಂಬ ದಾಖಲೆಗಳಿವೆ. ಅದನ್ನೊಮ್ಮೆ ಮುಖ್ಯಮಂತ್ರಿ ನೋಡಲಿ ಎಂದು ಕುಮಾರಸ್ವಾಮಿ ತಿಳಿಸಿದರು.

## ಪೌರಕಾರ್ಮಿಕರು ಆರೋಗ್ಯದ ಕಡೆ ಗಮನಹರಿಸಿ

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದ ಸ್ವಚ್ಛತೆ ಯಲ್ಲಿ ಸದಾ ತೊಡಗಿಕೊಂಡಿರುವ ಪೌರಕಾರ್ಮಿಕರು ತಾವು ವಾಸಿಸುವ ಪರಿಸರದ ಸ್ವಚ್ಛತೆ ಕಡೆ ಹೆಚ್ಚಿನ ಗಮನಕೊಟ್ಟು ತಮ್ಮ ಆರೋಗ್ಯದ ಕಡೆ ಹೆಚ್ಚಿನ ನಿಗಾ ವಹಿಸುವಂತೆ ಶಾಸಕ ಎ. ಮಂಜು ಅವರು ಸಲಹೆ ನೀಡಿದರು.



ಪಟ್ಟಣದ ಪೌರ ಕಾರ್ಮಿಕರ ಕಾಲೋನಿಯಲ್ಲಿ ನಡೆದ ಶ್ರೀ ಪಟ್ಟಲದಮ್ಮ ಜಾತ್ರಾ, ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಮಾತನಾಡಿದ ಅವರು, ಪೌರಕಾರ್ಮಿಕರು ಕೂಡ ತಮ್ಮ ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸ ಕಡೆ ಗಮನಕೊಡಬೇಕಿದೆ. ಸರ್ಕಾರದಿಂದ ಪ್ರತಿಯೊಬ್ಬ ಬಡವರಿಗೂ ಸೌಲಭ್ಯ ಗಳು ದೊರೆಯುತ್ತಿದ್ದು, ಇದನ್ನು ಬಳಕೆ ಮಾಡಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರುವಂತೆ ಕಿವಿಮಾತು ಹೇಳಿದರು.

ಪೌರ ಕಾರ್ಮಿಕರು ವಾಸಿಸುವ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಪೌರ ಕಾರ್ಮಿಕರಿಗೆ ಸಕಾಲಿಕವಾಗಿ ಪಟ್ಟಣ ಪಂಚಾಯಿತಿ ವತಿಯಿಂದ ಸವಲತ್ತು ಗಳು ದೊರೆಯುವಂತೆ ಮುಖ್ಯಾಧಿ ಕಾರಿ ಎಚ್ಚರ ವಹಿಸಬೇಕಿದೆ. ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ದೇವರಲ್ಲಿ ಪ್ರಾರ್ಥನೆ ಮಾಡಿದ್ದೇನೆ. ನಿಮ್ಮೆಲ್ಲರಿಗೂ ದೇವರು ಒಳಿತನ್ನು ಕಲ್ಪಿಸಲಿ ಎಂದು ಶುಭ ಹಾರೈಸಿದರು.

ಮುಖಂಡರು, ಮಕ್ಕಳು ಹಾಗೂ ನೂರಾರು ಭಕ್ತಾಧಿಗಳು ಉಪಸ್ಥಿತರಿದ್ದರು.

## ಮಕ್ಕಳಿಗಾಗಿ ಕಾರು ಖರೀದಿಸಿದ ಸರ್ಕಾರಿ ಶಾಲೆ ಶಿಕ್ಷಕರು

• ಪ್ರಜೋದಯ ವರದಿ

**ಸಕಲೇಶಪುರ:** ಸರ್ಕಾರಿ ಶಾಲೆಯನ್ನು ಉಳಿಸುವ ಹಾಗೂ ಗ್ರಾಮೀಣ ಭಾಗದ ಬಡ ಮಕ್ಕಳಿಗೆ ಶಿಕ್ಷಣದ ಅವಕಾಶ ಕಲ್ಪಿಸುವ ಅಪರೂಪದ ಕಾರ್ಯವೊಂದನ್ನು ಮಾಡುವ ಮೂಲಕ ತಾಲ್ಲೂಕಿನ ಇಬ್ಬರು ಸರ್ಕಾರಿ ಶಾಲಾ ಶಿಕ್ಷಕರು ಮಾದರಿಯಾಗಿದ್ದಾರೆ.




ತಾಲ್ಲೂಕಿನ ಕುಣಿಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಆನೆಪೀಡಿತ ಹಾಗೂ ಡಾಂಬರ ರಸ್ತೆ ಸೌಲಭ್ಯವಿಲ್ಲದ ಹಳಕೆರೆ ಎಂಬ ಪುಟ್ಟ ಗ್ರಾಮದಲ್ಲಿರುವ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 16 ವಿದ್ಯಾರ್ಥಿಗಳು ಹಾಗೂ ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಶಾಲೆಗೆ ಸಮೀಪದ ಕೆಂಪಿನಾಲ್ ಗ್ರಾಮದಿಂದ ಮಕ್ಕಳು ಪ್ರತಿನಿತ್ಯ ಬರಬೇಕಾಗಿದ್ದು, ಸಾರಿಗೆ ವ್ಯವಸ್ಥೆ ಇಲ್ಲದ ಕಾರಣ ಮಕ್ಕಳು ಶಾಲೆಗೆ ಬರಲು ತೀವ್ರ ತೊಂದರೆ ಅನುಭವಿಸುತ್ತಿದ್ದರು.

ಈ ಹಿನ್ನೆಲೆಯಲ್ಲಿ ಕಳೆದ ವರ್ಷ ಶಿಕ್ಷಕರು ತಮ್ಮ ಸ್ವಂತ ವೆಚ್ಚದಲ್ಲಿ ಖಾಸಗಿ ವಾಹನದ ವ್ಯವಸ್ಥೆ ಮಾಡಿದ್ದರು. ಆದರೆ ಅದು ಸಮರ್ಪಕವಾಗಿ ಕಾರ್ಯ ನಿರ್ವಹಿಸದ ಕಾರಣ, ಈ ವರ್ಷ ಶಾಲೆಯ ಶಿಕ್ಷಕರಾದ ಲೋಕೇಶ್ ಹಾಗೂ ತಮ್ಮಣ್ಣಶೆಟ್ಟಿ ವೈ.ಎಸ್. ಅವರು ತಮ್ಮ ಸಂಬಳದ ಹಣದಲ್ಲೇ ಕಾರು ಖರೀದಿಸಿ ಶಾಲಾ ಮಕ್ಕಳನ್ನು ಕರೆತಂದು ಬಿಡುವ ವ್ಯವಸ್ಥೆ ಮಾಡಿದ್ದಾರೆ.

ಶಿಕ್ಷಕರ ಈ ಸಾಮಾಜಿಕ ಕಾಳಜಿಗೆ ಗ್ರಾಮಸ್ಥರು, ಎಸ್‌ಡಿಎಂಸಿ ಸದಸ್ಯರು, ಶ್ರೀಶಕ್ತಿ ಸಂಘದ ಮಹಿಳೆಯರು, ಗ್ರಾಮದ ದಾನಿಗಳು ಹಾಗೂ ಎಸ್ಟೇಟ್ ಮಾಲೀಕರು ಸಹಕಾರ ನೀಡುವುದಾಗಿ ಭರವಸೆ ನೀಡಿದ್ದು, ಶಿಕ್ಷಕರ ಸೇವಾ ಮನೋಭಾವವನ್ನು ಅಭಿನಂದಿಸಿದ್ದಾರೆ.

ಕಾರ್ಯಕ್ರಮಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪ ಎಸ್. ಚಾಲನೆ ನೀಡಿ ಮಾತನಾಡಿ, ಶಿಕ್ಷಕರು ತಮ್ಮ ಸ್ವಂತ ಹಣದಲ್ಲಿ ವಾಹನ ಖರೀದಿಸಿ ಸರ್ಕಾರಿ ಶಾಲೆಯ ಉಳಿವಿಗಾಗಿ ಪ್ರಯತ್ನಿಸುತ್ತಿರುವುದು ರಾಜ್ಯದಲ್ಲೇ ಅತ್ಯುತ್ತಮ ಪ್ರಯತ್ನವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಇಲಾಖೆಯ ಅಧಿಕಾರಿಗಳಾದ ಗಂಗಾಧರ್, ಕುಶವಂತ್, ನಿರಂಜನ್, ಪೋಷಕರು, ಎಸ್‌ಡಿಎಂಸಿ ಸದಸ್ಯರು ಇದ್ದರು.

## ಶಾಹಿ ಸಂಸ್ಥೆಯಿಂದ ಪರಿಕರಗಳ ವಿತರಣೆ: ಶ್ಲಾಘನೆ

• ಪ್ರಜೋದಯ ವರದಿ

**ಅರಕಲಗೂಡು:** ನಗರದ ಶಾಹಿ ಸಂಸ್ಥೆ ಪ್ರತಿ ವರ್ಷದ ಸಿಎಸ್‌ಆರ್ ಅನುದಾನದಲ್ಲಿ ಸರ್ಕಾರಿ ಆರೋಗ್ಯ ಕೇಂದ್ರ ಹಾಗೂ ಶಾಲಾ ಕಾಲೇಜುಗಳಿಗೆ ಅಗತ್ಯವಿರುವ ಪರಿಕರ ಹಾಗೂ ಯಂತ್ರೋಪಕರಗಳನ್ನು ವಿತರಣೆ ಮಾಡುತ್ತಿರುವುದು ಅತ್ಯುತ್ತಮ ಸಮಾಜ ಮುಖಿ ಕಾರ್ಯವಾಗಿದೆ ಎಂದು ಶಾಸಕ ಎ.ಮಂಜು ಅವರು ತಿಳಿಸಿದರು.



ತಾಲೂಕಿನ ದೊಡ್ಡಮಗ್ಗೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಅರಕಲಗೂಡಿನ ಸಾರ್ವಜನಿಕ ಆಸ್ಪತ್ರೆಗೆ ಡಯಾಲಿಸಿಸ್ ಯಂತ್ರ ಕೊಡುಗೆ ನೀಡಿದ್ದರು. ಅದರ ಹಿಂದಿನ ವರ್ಷ ಸಂತೆಮರೂರು ಪ್ರಾಥಮಿಕ ಶಾಲೆಗೆ ಹೈಟೆಕ್ ಲ್ಯಾಬ್ ಕೊಡುಗೆಯಾಗಿ ಇದೇ ಸಂಸ್ಥೆ ನೀಡಿದೆ. ಮುಂದುವರಿದಂತೆ ಈ ಸಾಲಿನಲ್ಲಿ ದೊಡ್ಡಮಗ್ಗೆ ಮತ್ತು ಹೆತ್ತಗೌಡನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಉಚಿತವಾಗಿ ಅತ್ಯವಶ್ಯವಿರುವ ರಕ್ತ ಪರೀಕ್ಷೆಯ ಸಿಬಿಸಿ ಉಪಕರಣಗಳನ್ನು ನೀಡಿರುವುದು ಗ್ರಾಮೀಣ ಭಾಗದ ಬಡ ಜನರಿಗೆ ಅನುಕೂಲವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೊಡ್ಡಮಗ್ಗೆ ಆಸ್ಪತ್ರೆಗೆ ಹೆಚ್ಚಿನ ಜನರು ಚಿಕಿತ್ಸೆಗೆಂದು ಬರುತ್ತಾರೆ. ಈ ಹಿಂದೆ ಪ್ರಥಮ ಹಂತದ ರಕ್ತಪರೀಕ್ಷೆ ನಡೆಸಲಾಗುತ್ತಿತ್ತು. ಹೊಸದಾಗಿ ಸಿಬಿಸಿ ಉಪಕರಣ ಇರುವುದರಿಂದ ಮಲೇರಿಯಾ, ಡೆಂಗ್ಯೂ ಹಾಗೂ ಇತರೆ ರಕ್ತದ ಪರೀಕ್ಷೆಗೆಂದು ತಾಲೂಕು ಆಸ್ಪತ್ರೆಗೆ ಹೋಗುವುದು ತಪ್ಪುತ್ತದೆ. ದೊಡ್ಡಮಗ್ಗೆ ಆಸ್ಪತ್ರೆಗೆ ಜನರಿಂದ ಉತ್ತಮ ಪ್ರತಿಕ್ರಿಯೆ ಇದ್ದು, ಇದಕ್ಕೆ ಧಕ್ಕೆಯಾಗದಂತೆ ವೈದ್ಯರು, ಸಿಬ್ಬಂದಿಗಳು ಕಾರ್ಯ ನಿರ್ವಹಿಸಬೇಕೆಂದು ಅವರು ಸೂಚನೆ ನೀಡಿದರು.

ಹಾಸನದ ಶಾಹಿ ಸಂಸ್ಥೆಯಲ್ಲಿ ಮುಖ್ಯಸ್ಥರಾಗಿ ನಮ್ಮ ಸಂತೆಮರೂರು ಗ್ರಾಮದವರೇ ಆದ ನಮ್ಮ ಸ್ನೇಹಿತರ ಮಗ ವಿದ್ಯಾರಾಜೇಅರಸು ಅವರು ಕಾರ್ಯ ನಿರ್ವಹಿಸುತ್ತಿರುವ ಪರಿಣಾಮ ಪ್ರತಿವರ್ಷದ ಸಿಎಸ್‌ಆರ್ ಅನುದಾನದಲ್ಲಿ ಹೆಚ್ಚಿನ ಪಾಲು ಹುಟ್ಟಿದ ತಾಲ್ಲೂಕಿಗೆ ಕೊಡುತ್ತಾ ಬರುತ್ತಿದ್ದಾರೆ. ಇದಕ್ಕಾಗಿ ಸಂಸ್ಥೆಯ ಮುಖ್ಯಸ್ಥರು, ಅಧಿಕಾರಿಗಳು, ಸಿಬ್ಬಂದಿಗಳಿಗೆ ತಾಲೂಕಿನ ಜನತೆಯ ಪರವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿದರು.

ಗ್ರಾಮೀಣ ಪ್ರದೇಶದ ಜನರಿಗೆ ತುರ್ತಾಗಿ ಗ್ರಾಮೀಣ ಸೇವೆ ಒದಗಿಸುವ ಉದ್ದೇಶದಿಂದ ತುರ್ತಾಗಿ ರಕ್ತ ಪರೀಕ್ಷೆ ಯಂತ್ರಗಳನ್ನು ನೀಡುತ್ತಿದ್ದು ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳುವಂತೆ ಶಾಹಿ ಸಂಸ್ಥೆಯ ಮುಖ್ಯಸ್ಥರಾದ ವಿದ್ಯಾರಾಜೇ ಅರಸ್ ಅವರು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಪುಷ್ಪಲತಾ, ಅರಕಲಗೂಡು ರೋಟರಿ ಕ್ಲಬ್ ಅಧ್ಯಕ್ಷರು, ಸದಸ್ಯರು ಪ್ರಾಥಮಿಕ ಆರೋಗ್ಯ ಕೇಂದ್ರ ರಕ್ಷ ಸಮಿತಿಯ ಉಪಾಧ್ಯಕ್ಷರು ಹಾಗೂ ಸದಸ್ಯರು ಉಪಸ್ಥಿತರಿದ್ದರು.

## ತೂಕ, ಅಳತೆಯಲ್ಲಿ ವ್ಯತ್ಯಾಸವಿದ್ದರೆ ದೂರು



• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಎಲ್ಲಾ ರೀತಿಯ ಗ್ರಾಹಕರಿಗೆ ವರ್ತಕರಿಂದ ಪಡೆಯುವ ಪದಾರ್ಥಗಳಿಗೆ ತೂಕ ಮತ್ತು ಅಳತೆ ಕಡಿಮೆ ನೀಡಿದಲ್ಲಿ ಅಥವಾ ಎಂ.ಆರ್.ಪಿ ದರಕ್ಕಿಂತ ಹೆಚ್ಚಿನ ದರ ಪಡೆದುಕೊಂಡಲ್ಲಿ ಸಹಾಯಕ ನಿಯಂತ್ರಕರು ರಾಜೀವ್ ದೂರವಾಣಿ ಸಂಖ್ಯೆ 9902948490, ಸಹಾಯಕ ನಿಯಂತ್ರಕರು ಪ್ರಸನ್ನ ಕುಮಾರ್ ದೂರವಾಣಿ ಸಂಖ್ಯೆ 9448087802, ಕಾನೂನು ಮಾಪನ ಶಾಸ್ತ್ರ ಇಲಾಖೆ ಸೆಷನ್ ಕೋರ್ಟ್ ಹಿಂಭಾಗ ಹಾಸನ ಕಚೇರಿ ದೂರವಾಣಿ ಸಂಖ್ಯೆ 08172-268868ಗೆ ದೂರು ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

## ಬಿ.ಗಿರೀಶ್ ಅವಿರೋಧ ಆಯ್ಕೆ



• ಪ್ರಜೋದಯ ವರದಿ

**ಬೇಲೂರು:** ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಿ. ಗಿರೀಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಗಿರೀಶ್ ಅವರು ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಗುರುಮೂರ್ತಿ ಅವರು ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಆಯ್ಕೆಯಾದ ಬಳಿಕ ಮಾತನಾಡಿದ ಗಿರೀಶ್ ಅವರು, ತಮ್ಮನ್ನು ಆರನೇ ಅವಧಿಗೆ ಅವಿರೋಧವಾಗಿ ಆಯ್ಕೆ ಮಾಡಿದ ಆಡಳಿತ ಮಂಡಳಿ, ನಿರ್ದೇಶಕರು ಹಾಗು ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು. ಸಂಘದಲ್ಲಿ 1,112 ಶೇರುದಾರರಿದ್ದು, ಸದಸ್ಯರಿಗೆ ಸುಮಾರು 7.18 ಕೋಟಿ ವಿವಿಧ ಸಾಲ ಸೌಲಭ್ಯ ಒದಗಿಸಲಾಗಿದೆ. ಶೂನ್ಯ ಬಡ್ಡಿದರ ಕೃಷಿ ಸಾಲ, ಹೈನುಗಾರಿಕೆ ಹಾಗು ಮಧ್ಯಮಾವಧಿ ಸಾಲ ಸೇರಿ ರೈತಪರ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಸಂಘದ ಸ್ವಂತ ಕಟ್ಟಡ ನಿರ್ಮಾಣಕ್ಕೆ ಅಗತ್ಯ ಪ್ರಕ್ರಿಯೆ ಪೂರ್ಣಗೊಳಿಸಿ, ಹೊಸ ವರ್ಷದಿಂದ ಕಾರ್ಯಾರಂಭಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಉಪಾಧ್ಯಕ್ಷ ಎಸ್.ಎ. ರಮೇಶ್, ಮಾಜಿ ಅಧ್ಯಕ್ಷೆ ಶಾರದಮ್ಮ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹೊನ್ನೇಗೌಡ, ನಿರ್ದೇಶಕ ಎಸ್.ನಾಗೇಶ್ ಇನ್ನಿತರರು ಉಪಸ್ಥಿತರಿದ್ದರು.

## ಪತ್ರಿಕಾ ವಿತರಕ ಮಿಥುನ್‌ಗೆ ಪತ್ರಕರ್ತರ ಸಂಘದಿಂದ ಅಭಿನಂದನೆ

• ಪ್ರಜೋದಯ ವರದಿ

**ಬೇಲೂರು:** ಮನೆ -ಮನೆಗೆ ಪತ್ರಿಕೆ ವಿತರಿಸುತ್ತಿದ್ದ ಯುವಕ ಮಿಥುನ್ ಭಾರತೀಯ ಸೇನೆಗೆ ಆಯ್ಕೆಯಾಗಿರುವುದು ತಾಲ್ಲೂಕಿಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಬಿ.ಶಿವರಾಜು ಹೇಳಿದರು.



ಪಟ್ಟಣದ ತಾಲ್ಲೂಕು ಪತ್ರಕರ್ತರ ಭವನದಲ್ಲಿ ಭಾರತೀಯ ಸೇನೆಗೆ ಆಯ್ಕೆಯಾದ ಪತ್ರಿಕಾ ವಿತರಕ ಮಿಥುನ್ ಅವರಿಗೆ ಪತ್ರಕರ್ತರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ರಕ್ಷಣೆಗಾಗಿ ಹಗಲಿರುಳು ಕರ್ತವ್ಯ ನಿರ್ವಹಿಸುವ ಭಾರತೀಯ ಸೇನೆಗೆ ಸೇರುವುದು ಪ್ರತಿಯೊಬ್ಬ ಯುವಕನ ಕನಸಾಗಿರಬೇಕು. ಶಿಸ್ತು, ಧೈರ್ಯ ಮತ್ತು ದೇಶಭಕ್ತಿಯ ಪ್ರತೀಕವಾಗಿರುವ ಸೇನೆಯಲ್ಲಿ ಸೇವೆ ಸಲ್ಲಿಸುವ ಅವಕಾಶ ಪಡೆದಿರುವ ಮಿಥುನ್ ಅವರ ಸಾಧನೆ ಇತರ ಯುವಕರಿಗೆ ಪ್ರೇರಣೆಯಾಗಲಿದೆ ಎಂದರು.

ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಲಕ್ಷ್ಮಣ್ ಮಾತನಾಡಿ, ಸಾಮಾನ್ಯ ಪತ್ರಿಕಾ ವಿತರಕರಾಗಿ ಕೆಲಸ ಮಾಡುತ್ತಿದ್ದ ಮಿಥುನ್ ಅವರು ಕಠಿಣ ಪರಿಶ್ರಮ, ಶಿಸ್ತು ಹಾಗೂ ಆತ್ಮವಿಶ್ವಾಸದ ಮೂಲಕ ಭಾರತೀಯ ಸೇನೆಗೆ ಆಯ್ಕೆಯಾಗಿರುವುದು ಯುವಜನತೆಗೆ ಮಾದರಿಯಾಗಿದೆ. ಅವರು ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ದೇಶಸೇವೆಯಲ್ಲಿ ಉತ್ತಮ ಸಾಧನೆ ಮಾಡಲಿ ಎಂದು ಅವರು ಹಾರೈಸಿದರು.

ಜಿಲ್ಲಾ ಪತ್ರಕರ್ತರ ಸಂಘದ ನಿರ್ದೇಶಕ ಮಲ್ಲೇಶ್ ಮಾತನಾಡಿ, ಮಿಥುನ್ ಅವರು ತಮ್ಮ ಪರಿಶ್ರಮದ ಮೂಲಕ ದೇಶಸೇವೆಯ ಅಪರೂಪದ ಅವಕಾಶ ಪಡೆದಿದ್ದಾರೆ. ಯುವಕರು ದುಶ್ಚಟಗಳಿಂದ ದೂರವಿದ್ದು, ದೇಶಭಕ್ತಿ ಹಾಗೂ ಸಮಾಜಮುಖಿ ಚಿಂತನೆ ಬೆಳೆಸಿಕೊಳ್ಳಬೇಕು ಎಂದರು.

ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಬಿ.ಎಸ್.ಆರಾಧ್ಯ ಮಾತನಾಡಿ, ಪತ್ರಿಕೆ ವಿತರಣೆಯ ಜೊತೆಗೆ ವೆಲ್ಡಿಂಗ್ ಕೆಲಸ ಮಾಡಿಕೊಂಡು ಸೇನೆ ಸೇರುವ ಗುರಿ ಸಾಧಿಸಿರುವ ಮಿಥುನ್ ಅವರ ಪರಿಶ್ರಮ ಶ್ಲಾಘನೀಯವಾಗಿದೆ ಎಂದು ಹೇಳಿದ.

ಪತ್ರಕರ್ತ ಪೈಂಟ್ ರವಿ ಮಾತನಾಡಿ, ಪತ್ರಕರ್ತರ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಮಿಥುನ್ ಅವರ ಸಾಧನೆ ಬೇಲೂರಿನ ಹೆಮ್ಮೆಯಾಗಿದೆ. ಪ್ರತಿದಿನ ಬೆಳಿಗ್ಗೆ ಪತ್ರಿಕೆ ವಿತರಿಸುತ್ತಾ ಪರಿಶ್ರಮದಿಂದ ಬೆಳೆದ ಅವರು ಇಂದು ದೇಶಸೇವೆಯ ಅವಕಾಶ ಪಡೆದಿರುವುದು ಯುವಕರಿಗೆ ಪ್ರೇರಣೆಯಾಗಿದೆ ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಮಿಥುನ್, ಪತ್ರಿಕೆ ವಿತರಿಸುವ ಕೆಲಸದ ಜೊತೆಗೆ ವೆಲ್ಡಿಂಗ್ ಕೆಲಸ ಮಾಡಿಕೊಂಡು ಭಾರತೀಯ ಸೇನೆ ಸೇರುವ ಕನಸಿಗಾಗಿ ನಿರಂತರವಾಗಿ ಶ್ರಮಿಸಿದೆ. ಹಲವು ಸವಾಲುಗಳು ಎದುರಾದರೂ ಗುರಿಯಿಂದ ಹಿಂದೆ ಸರಿಯಲಿಲ್ಲ. ಹಿರಿಯರ ಮಾರ್ಗದರ್ಶನ, ಕುಟುಂಬದ ಬೆಂಬಲ ಹಾಗೂ ಸ್ನೇಹಿತರ ಪ್ರೋತ್ಸಾಹದಿಂದ ಇಂದು ಸೇನೆಗೆ ಆಯ್ಕೆಯಾಗಿರುವುದು ಜೀವನದ ಅತ್ಯಂತ ಸಂತಸದ ಕ್ಷಣವಾಗಿದೆ. ದೇಶಸೇವೆ ಮಾಡುವ ಅವಕಾಶ ಸಿಕ್ಕಿರುವುದು ನನ್ನ ಪಾಲಿನ ದೊಡ್ಡ ಗೌರವ. ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಪ್ರಾಮಾಣಿಕತೆ, ಶಿಸ್ತು ಹಾಗೂ ಸಮರ್ಪಣೆಯಿಂದ ಕರ್ತವ್ಯ ನಿರ್ವಹಿಸುತ್ತೇನೆ ಎಂದು ತಿಳಿಸಿದರು.

ಪತ್ರಕರ್ತರ ಸಂಘದ ಖಜಾಂಚಿ ಲೋಹಿತ್, ಕಾರ್ಯದರ್ಶಿ ಗಣೇಶ್, ರವಿಹೊಳ್ಳ, ಎಸ್.ಕೆ.ನಾಗೇಶ್, ಸಂತೋಷ್, ಅರುಣ್‌ಕುಮಾರ್, ಕೇಬಲ್ ರಮೇಶ್, ನಿಂಗರಾಜು, ಶ್ರೀಹರಿ, ನೀಲಕಂಠ, ದೀಪು, ಜಗದೀಶ್, ವಿನೋದ್, ವಿರೂಪಾಕ್ಷ ಹಾಗೂ ವಿತರಕರಾದ ಚಂದನ್, ಲೋಹಿತ್, ಯಶವಂತ್, ಪ್ರೇಂಕುಮಾರ್ ಉಪಸ್ಥಿತರಿದ್ದರು.

## ವಿದ್ಯಾರ್ಥಿ ನಿಲಯಕ್ಕೆ ಆರೋಗ್ಯ ಇಲಾಖೆ ತಂಡ ಭೇಟಿ



• ಪ್ರಜೋದಯ ವರದಿ

**ಜಾವಗಲ್:** ಹೋಬಳಿಯ ಉಂಡಿಗನಾಳು ಗ್ರಾಮದ ಸಮಾಜ ಕಲ್ಯಾಣ ಇಲಾಖೆ ಬಾಲಕರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಕ್ಕೆ ಉಂಡಿಗನಾಳು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಕೆ.ಆರ್.ದೀಪಕ್ ಅವರ ನೇತೃತ್ವದ ಆರೋಗ್ಯ ಇಲಾಖೆ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಇತ್ತೀಚೆಗೆ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಶುಭಂಶುಕ್ಲ ಅವರು ಉಂಡಿಗನಾಳು ಗ್ರಾಮ ಪಂಚಾಯಿತಿಗೆ ಭೇಟಿ ನೀಡಿದ ವೇಳೆ ವಿದ್ಯಾರ್ಥಿ ನಿಲಯವನ್ನು ಪರಿಶೀಲಿಸುವಂತೆ ನೀಡಿದ್ದ ಸೂಚನೆಯ ಮೇರೆಗೆ ಪರಿಶೀಲನೆ ನಡೆಸಲಾಯಿತು.

ಡಾ. ಕೆ.ಆರ್.ದೀಪಕ್, ಆರೋಗ್ಯ ನಿರೀಕ್ಷಕ ಸದ್ಗುಣ, ಆಶಾ ಕಾರ್ಯಕರ್ತೆಯರಾದ ಮಮತಾ, ರೇಣುಕಾ ಹಾಗು ಶುಶ್ರೂಷಕಿ ರೇಖಾ ಅವರು ವಿದ್ಯಾರ್ಥಿಗಳ ಕೊಠಡಿಗಳು, ಆಹಾರ ದಾಸ್ತಾನು ಕೊಠಡಿ, ಅಡುಗೆಮನೆ, ಸ್ನಾನಗೃಹ, ಶೌಚಾಲಯ ಹಾಗೂ ಆವರಣವನ್ನು ಪರಿಶೀಲಿಸಿದರು.


ಆಹಾರ ದಾಸ್ತಾನು ಕೊಠಡಿಯಲ್ಲಿನ ಆಹಾರ ಪದಾರ್ಥಗಳನ್ನು ಪರಿಶೀಲಿಸಿದ ವೇಳೆ ಯಾವುದೇ ಅವಧಿ ಮೀರಿದ ಆಹಾರ ಪದಾರ್ಥಗಳು ಕಂಡುಬರಲಿಲ್ಲ. ಎಲ್ಲಾ ಆಹಾರ ಸಾಮಗ್ರಿಗಳು ಗುಣಮಟ್ಟದ ಹಾಗು ಬಳಕೆಗೆ ಯೋಗ್ಯವಾಗಿವೆ ಎಂದು ಅಧಿಕಾರಿಗಳು ತಿಳಿಸಿದರು. ವಿದ್ಯಾರ್ಥಿ ನಿಲಯದ ಮೇಲ್ವಿಚಾರಕ ಮೈಲಾರಪ್ಪ ಹಾಗೂ ಅಡುಗೆ ಸಿಬ್ಬಂದಿ ತಿಮ್ಮರಾಜು ಅಗತ್ಯ ಮಾಹಿತಿಯನ್ನು ಒದಗಿಸಿದರು.

## ವಿಜಯ್‌ಗೆ ರಾಜಕೀಯದ ಗಂಧ ಗಾಳಿ ಗೊತ್ತಿಲ್ಲ: ಆರ್.ಅಶೋಕ್ ವಾಗ್ದಾಳಿ

# ತಮಿಳುನಾಡಿಗೆ ಡಿ.ಕೆ.ಶಿ. ಕದ್ದುಮುಚ್ಚಿ ನೀರು ಬಿಟ್ಟಿದ್ದಾರೆ

• ಪ್ರಜೋದಯ ವರದಿ

**ಬೆಂಗಳೂರು:** ತಮಿಳುನಾಡಿಗೆ ನೀರು ಬಿಡಲು ಆಗುವುದಿಲ್ಲ ಎಂದು ಸಿಎಂ ಡಿ.ಕೆ ಶಿವಕುಮಾರ್ ಹೇಳಿದ ಮೇಲೂ ಕದ್ದುಮುಚ್ಚಿ ಕಾವೇರಿ ನೀರು ಬಿಡಲಾಗುತ್ತಿದೆ. ಅಂದಾಜು 2000 ಕ್ಯುಸೆಕ್ ನೀರು ಬಿಡ್ತಿದ್ದಾರೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಅವರು ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.





ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮಿಳುನಾಡಿನಲ್ಲಿ ಇರೋದು ಅವರ ಮೈತ್ರಿ ಸರ್ಕಾರ. ಮೈತ್ರಿ ಮೆಚ್ಚಿಸಲು ಕದ್ದು ಮುಚ್ಚಿ ನೀರು ಬಿಡುತ್ತಿದ್ದಾರೆ. ನಮ್ಮಲ್ಲಿ ನೀರು ಎಷ್ಟಿದೆ? ಯಾಕೆ ನಮಗೆ ಬಿಡಲು ಆಗುತ್ತಿಲ್ಲ ಎಂದು ರೈತರಿಗೂ ಸರ್ಕಾರ ಮಾಹಿತಿ ಕೊಟ್ಟಿಲ್ಲ. ಸರ್ವ ಪಕ್ಷ ಸಭೆಯನ್ನೂ ಸರ್ಕಾರ ಕರೆದಿಲ್ಲ ಎಂದು ಕಿಡಿಕಾರಿದ್ದಾರೆ.

ಅವನು ನಿನ್ನೆ ಮೊನ್ನೆ ಬಂದ ರಾಜಕಾರಣಿ, ರಾಜಕೀಯದ ಗಂಧಗಾಳಿ ಗೊತ್ತಿಲ್ಲ, ಮುಖ್ಯಮಮಂತ್ರಿಯಾಗಿ ಇನ್ನೂ ಒಂದು ತಿಂಗಳು ಕಳೆದಿಲ್ಲ. ತಮಿಳುನಾಡಿನಲ್ಲಿ ಸದನ ಕರೆದು ಮೇಕೆದಾಟು ಯೋಜನೆಗೆ ನಾವು ತಡೆ ಮಾಡುತ್ತೇವೆ, ಮಾಡಿ ನೋಡೋಣ ಅಂತಾ ಧಮ್ಕಿ ಹಾಕಿ ರೆಸಲ್ಯೂಷನ್ ಮಾಡಿದ್ದಾರೆ. ಇಂತಹ ತಾಕತ್ತು ಡಿ.ಕೆ.ಶಿ.ಗೆ ಇಲ್ಲ ಎಂದು ಹೇಳಿದರು.

ನಮ್ಮ ಮುಖ್ಯಮಂತ್ರಿ ದಿನನಿತ್ಯ ಯಾವುದಾದರೊಂದು ದೇವಸ್ಥಾನಕ್ಕೆ ಹೋಗೋದು, ನಾಮ ಹಾಕಿಕೊಳ್ಳೋದು, ವಿಭೂತಿ ಹಾಕಿಕೊಂಡು ಬರೋದು ಇಷ್ಟೆ, ಅವ್ರಿಗೆ ನಾನು ಹಿಂದೂ ಅಂತಾ ತೋರಿಸಿಕೊಳ್ಳಬೇಕು ಅಷ್ಟೆ ಎಂದು ಅಶೋಕ್ ವ್ಯಂಗ್ಯವಾಡಿದ್ದಾರೆ.

ಗೃಹಲಕ್ಷ್ಮಿ ಯೋಜನೆಯಲ್ಲಿ 225 ಕೋಟಿ ರೂ. ಹಗರಣ ನಡೆದಿದೆ ಎಂದು ಸಿಎಜಿ ವರದಿ ಹೇಳಿದೆ. ಈ ಪ್ರಕರಣದ ತನಿಖೆಗೆ ಎಸ್‌ಐಟಿ ರಚಿಸಬೇಕು. 225 ಕೋಟಿ ರೂ. ಹಣವನ್ನು ನಕಲಿ ಖಾತೆಗಳಿಗೆ ಹಾಕಲಾಗಿದೆ. ನಕಲಿ ಖಾತೆಗಳು ರದ್ದಾದ ಮೇಲೂ ಅವೇ ಖಾತೆಗಳಿಗೆ ಹಣ ಹೋಗಿದೆ. ಇದು ಅಧಿಕಾರಿಗಳ ಕರ್ಮಕಾಂಡ. ಗ್ಯಾರಂಟಿ ಜಾರಿ ಸಮಿತಿ ಏನು ಮಾಡುತ್ತಿದೆ ಎಂದು ವ್ಯಕ್ತಪಡಿಸಿದ್ದಾರೆ.

ಒಟ್ಟಾರೆಯಾಗಿ, ಆದಾಯ ತೆರಿಗೆ ಪಾವತಿಸುವ ಮತ್ತು ಜಿಎಸ್ಟಿ ರಿಟರ್ನ್ಸ್ ಸಲ್ಲಿಸುವ 1,94,560 ಮಹಿಳೆಯರನ್ನು ಯೋಜನೆಯಿಂದ ಹೊರಗಿಡಲಾಗಿದೆ ಎಂದು ಗುರುತಿಸಲಾಗುತ್ತಿದೆ ಎಂದು ಅದು ಹೇಳಿದೆ. ಒಟ್ಟಾರೆಯಾಗಿ, ಈ ಯೋಜನೆಯಡಿ ನೋಂದಾಯಿಸಲಾದ 2,88,376 ಮಹಿಳೆಯರು ಸಾವನ್ನಪ್ಪಿದ್ದಾರೆ. ಮೃತ ಫಲಾನುಭವಿಗಳ ಬಗ್ಗೆ ಮಾಹಿತಿಯನ್ನು ಇ-ಜನ್ಮ/ಕುಟುಂಬ ಸಾಫ್ಟ್‌ವೇರ್ ಮಾಹಿತಿ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಪಿಡಿಒಗಳ ಮೂಲಕ ಪಡೆಯಲಾಗುತ್ತಿದೆ. ಅಂತಹ ಫಲಾನುಭವಿಗಳ ಹೆಸರುಗಳನ್ನು ಶೀಘ್ರದಲ್ಲೇ ಅಳಿಸಲಾಗುವುದು ಎಂದು ತಿಳಿಸಿದ್ದಾರೆ.

ಮೃತ ಫಲಾನುಭವಿಗಳಲ್ಲಿ, ನಿಯಮಗಳ ಪ್ರಕಾರ 1,03,922 ಜನರ ಹೆಸರುಗಳನ್ನು ಪಡಿತರ ಚೀಟಿಗಳಲ್ಲಿ ಬದಲಾಯಿಸಲಾಗಿದೆ ಮತ್ತು ಮರು ನೋಂದಣಿಯ ನಂತರ ಹೊಸ ಕುಟುಂಬ ಮುಖ್ಯಸ್ಥರಿಗೆ ಹಣಕಾಸಿನ ನೆರವು ನೀಡಲಾಗುತ್ತಿದೆ ಎಂದಿದ್ದಾರೆ.

ಫಲಾನುಭವಿಗಳ ಸಾವಿನ ಬಗ್ಗೆ ಸರಿಯಾದ ಸಮಯಕ್ಕೆ ಮಾಹಿತಿ ಲಭ್ಯವಿಲ್ಲದ ಕಾರಣ, 1,08,755 ಮೃತ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ 115 ಕೋಟಿ ರೂ.ಗಳನ್ನು ವರ್ಗಾಯಿಸಲಾಗಿದೆ. ಈ ಮೊತ್ತದಲ್ಲಿ, 15.24 ಕೋಟಿ ರೂ.ಗಳನ್ನು ಬ್ಯಾಂಕುಗಳ ಮೂಲಕ ಸರ್ಕಾರದ ಖಾತೆಗೆ ಹಿಂತಿರುಗಿಸಲಾಗಿದೆ. ಉಳಿದ ಹಣವನ್ನು ಮರು ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಇಲಾಖೆ ತಿಳಿಸಿದೆ.

## ಶಿಷ್ಯವೇತನಕ್ಕೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಸಮಾಜ ಕಲ್ಯಾಣ ಇಲಾಖೆವತಿಯಿಂದ 2026-27ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಕಾನೂನು ಪದವೀಧರರಿಗೆ ವೃತ್ತಿ ತರಬೇತಿಯ ಅವಧಿಯಲ್ಲಿ ಶಿಷ್ಯವೇತನಕ್ಕಾಗಿ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ .

ವರ್ಷದ ಎಲ್ಲಾ ದಿನಗಳು (365) ONLINE ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುವುದು, ಪರಿಶಿಷ್ಟ ಜಾತಿ ಅಭ್ಯರ್ಥಿಗಳು ಅರ್ಜಿಗಳನ್ನು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ www.sw.kar.nic.in ನಲ್ಲಿ ಪರಿಶಿಷ್ಟ ವರ್ಗದ ಅಭ್ಯರ್ಥಿಗಳು www.twd.karnataka.gov.in ಅರ್ಜಿ ಮತ್ತು ಅಗತ್ಯ ದಾಖಲಾತಿಗಳನ್ನು ಸಲ್ಲಿಸುವಂತೆ ಕೋರಲಾಗಿದೆ.

## ಅರ್ಜಿ ಆಹ್ವಾನ

**ಹಾಸನ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದ ವಸತಿ ರಹಿತರಿಗೆ ವಸತಿ ಯೋಜನೆಯಡಿ ಮನೆ ನಿರ್ಮಾಣ ಮಾಡಿಕೊಳ್ಳುವ ಅರ್ಜಿಗಳನ್ನು ಆಹ್ವಾನಿಸಿದ್ದು, ಸಂಬಂಧಪಟ್ಟ ಸಮುದಾಯದ ಫಲಾಪೇಕ್ಷಿಗಳು ಅರ್ಜಿಗಳನ್ನು ಜು.4 ರೊಳಗೆ ಸಲ್ಲಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

# ಮೊಹರಂ: ಭಾವೈಕ್ಯತೆ ಸಾರಿದ ಹಬ್ಬ

## ಹಿಂದೂ- ಮುಸ್ಲಿಮರಿಂದ ಬೆಂಕಿ ಕೆಂಡಕ್ಕೆ ಉಪ್ಪು, ಮೆಣಸು ಸುರಿದು ಆಚರಣೆ



• ಪ್ರಜೋದಯ ವರದಿ

**ಅರಸೀಕೆರೆ:** ಸಮಾಜದಲ್ಲಿ ಭಾವೈಕ್ಯತೆಯ ಸಂಕೇತವಾಗಿರುವ ಮುಸ್ಲಿಮರ ಪವಿತ್ರ ಮೊಹರಂ ಹಬ್ಬದ ಅಂಗವಾಗಿ ಕೆಂಡದ ಗುಂಡಿಗೆ ಹಿಂದೂ- ಮುಸ್ಲಿಂ ಎಂಬ ಭೇದವಿಲ್ಲದೆ ಎಲ್ಲರೂ ಉಪ್ಪು ಮತ್ತು ಮೆಣಸನ್ನು ಹಾಕುವ ಮೂಲಕ ಭಾವೈಕ್ಯತೆ ಸಂದೇಶವನ್ನು ಸಾರಿದರು.

ಮೊಹರಂ ಆಚರಣೆಯ ಒಂಬತ್ತನೇ ದಿನ ಸಂಪ್ರದಾಯದಂತೆ ಮುಸ್ಲಿಂ ಧರ್ಮಿಯರು ಬಾಬಯ್ಯನ ಆರಾಧನೆಯನ್ನು ಮಾಡುತ್ತಾರೆ ಈ ಆಚರಣೆಯಲ್ಲಿ ಬಾಬಯ್ಯನಿಗೆ ಹಿಂದೂ ಧರ್ಮಿಯರು ಸಹ ಸಕ್ಕರೆ ಮತ್ತು ಕಡ್ಲೆಯನ್ನು ಬಾಬಯ್ಯನಿಗೆ ಸಮರ್ಥಿಸಿ ನಂತರ ಕೆಂಡದ ಗುಂಡಿಗೆ ಉಪ್ಪು ಮತ್ತು ಮೆಣಸನ್ನ ಹಾಕಿದರೆ ಮನದ ಇಷ್ಟಾರ್ಥಗಳು ಈಡೇರುತ್ತವೆ ಎಂದು ನಂಬಿಕೆ ಇರುವುದರಿಂದ ಈ ಆಚರಣೆಯಲ್ಲಿ ಹಿಂದೂ ಮತ್ತು ಮುಸ್ಲಿಮರು ಸೇರಿ ಆಚರಿಸುವುದು ಮೊಹರಂ ಹಬ್ಬದ ವಿಶೇಷವಾಗಿದೆ.

ಬಾಬಯ್ಯನ ದರ್ಶನ ಮಾಡಿ ಕೆಂಡಕ್ಕೆ ಉಪ್ಪು ಮತ್ತು ಮೆಣಸನ್ನು ಸಮರ್ಪಿಸಿದ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಮಾತನಾಡಿ, ಯಾವುದೇ ಧರ್ಮದ ಹಬ್ಬ ಹರಿದಿನಗಳ ಆಚರಣೆ ಆದರೂ ಒಂದು ಧರ್ಮೀಯರು ಆಚರಣೆ ಮಾಡುವುದಕ್ಕಿಂತ ಇತರ ಧರ್ಮಿಯರು ಸೇರಿ ಆಚರಿಸಿದರೆ ಆಚರಣೆಯ ಮೌಲ್ಯ ಹೆಚ್ಚುತ್ತದೆ ಅಲ್ಲದೆ ಸಮಾಜದಲ್ಲಿ ಸಾಮರಸ್ಯದ ವಾತಾವರಣ ನಿರ್ಮಾಣವಾಗುತ್ತದೆ ಅಂತಹ ಆಚರಣೆಗಳಲ್ಲಿ ಮೊಹರಂ ಹಬ್ಬ ಒಂದಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸುವರು.

ಕಾರ್ಯಕ್ರಮದಲ್ಲಿ ನಗರಸಭೆಯ ನಿಕಟ ಪೂರ್ವ ಅಧ್ಯಕ್ಷ ಎಂ. ಸಮೀವುಲ್ಲಾ ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಸಿಕಂದ,ರ್‌ಸುನ್ನಿ ಮುಸ್ಲಿಂ ಜಮಾತ್ ಕಮಿಟಿ ಅಧ್ಯಕ್ಷ ಅಫ್ರೋಜ್ ಪಾಷಾ, ಉಪಾಧ್ಯಕ್ಷ ಸೈಯದ್ ದಸ್ತಿಗೀರ್, ಕಾರ್ಯದರ್ಶಿ ಮಹಮ್ಮದ್, ಶರೀಫ್ ನಗರಸಭೆಯ ಮಾಜಿ ಸದಸ್ಯರಾದ ಅಬ್ದುಲ್ ಜಮೀಲ್, ಯೂನಸ್, ರೋಷನ್, ಮುಸ್ಲಿಂ ಸಮಾಜದ ಮುಖಂಡರಾದ ಟಿಪ್ಪು, ಮೋಯಿದ್ದಿನ್ ಪಾಷಾ, ಮನ್ಸೂರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ದೇಣಿಗೆ ಲೂಟಿ: ಸುಪ್ರೀಂ ನೇತೃತ್ವದಲ್ಲಿ ತನಿಖೆಯಾಗಲಿ

• ಪ್ರಜೋದಯ ವರದಿ



**ನವದೆಹಲಿ:** ಅಯೋಧ್ಯೆಯ ರಾಮ ಮಂದಿರಕ್ಕೆ ಬಂದ ದೇಣಿಗೆಯಲ್ಲಿ ನಡೆದಿದೆ ಎನ್ನಲಾದ ಹಣ ದುರುಪಯೋಗ ಪ್ರಕರಣದ ತನಿಖೆಯನ್ನು ಸುಪ್ರೀಂ ಕೋರ್ಟ್ ನೇತೃತ್ವದಲ್ಲಿ ನಡೆಸ ಬೇಕು ಮತ್ತು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಅನ್ನು ಕೂಡಲೇ ವಿಸರ್ಜಿಸಬೇಕೆಂದು ಕಾಂಗ್ರೆಸ್ ಆಗ್ರಹಿಸಿದೆ.

ರಾಮ ಮಂದಿರದ ದೇಣಿಗೆ ಕಳವು ಪ್ರಕರಣ ಬಹಿರಂಗವಾಗಿರುವುದರಿಂದ ಹಿಂದೂ ಧರ್ಮದ ಸ್ವಯಂ ಘೋಷಿತ ರಕ್ಷಕರು ಸಂಪೂರ್ಣವಾಗಿ ಬೆತ್ತಲಾಗಿದ್ದಾರೆಂದು ಬಿಜೆಪಿ ಹಾಗು ಆರ್‌ಎಸ್‌ಎಸ್ ವಿರುದ್ಧ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ವಾಗ್ದಾಳಿ ನಡೆಸಿದ್ದಾರೆ.ರಾಜಕೀಯ ಲಾಭಕ್ಕಾಗಿ ಅಯೋಧ್ಯೆಯನ್ನು ಬಳಸಿಕೊಂಡಿದ್ದ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರು ಭಕ್ತರ ದೇಣಿಗೆಯನ್ನು ಲೂಟಿ ಮಾಡಿದ್ದಾರೆ. ಅದರಿಂದ ಭಕ್ತರ ಭಾವನೆಗಳಿಗೆ ಧಕ್ಕೆಯುಂಟಾಗಿದೆ ಎಂದಿದ್ದಾರೆ. ಬಿಜೆಪಿಯವರು ಒಂದೆಡೆ ನೋಂದಾಯಿತ ಟ್ರಸ್ಟ್‌ಗಳನ್ನು ಕ್ರೂರ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯ (ಎಫ್‌ಸಿಆರ್‌ಎ) ನಿಯಮಗಳ ಮೂಲಕ ನಿಯಂತ್ರಿಸಲು ಬಯಸುತ್ತಿದ್ದಾರೆ. ಮತ್ತೊಂದೆಡೆ ನೋಂದಣಿಯೇ ಆಗದ ಆರ್‌ಎಸ್‌ಎಸ್‌ನಂತಹ ಸಂಸ್ಥೆಗಳು ನಮ್ಮ ದೇಶದ ದೇವಾಲಯಗಳನ್ನು ಲೂಟಿ ಹೊಡೆಯಲು ಮುಕ್ತವಾಗಿವೆ. ಇದು ಯಾವ ನಿಲುವು ಎಂದು ಅವರು ಪ್ರಶ್ನಿಸಿದ್ದಾರೆ.

ಸಂಘ ಪರಿವಾರದವರು (ಆರ್‌ಎಸ್‌ಎಸ್) ನಾವು ನಿಜವಾದ ಹಿಂದೂಗಳೆಂದು ನಾಟಕ ಮಾಡುತ್ತಿರುವುದು ಈಗ ಮತ್ತಷ್ಟು ಬಹಿರಂಗಗೊಂಡಿದೆ. ಏಕೆಂದರೆ ಪ್ರಸ್ತುತ ದಾಖಲಾಗಿರುವ ಎಫ್‌ಐಆರ್‌ನಲ್ಲಿ ದೇವಾಲಯದ ಟ್ರಸ್ಟಿಗಳ ಹೆಸರೇ ಇಲ್ಲ. ಬದಲಿಗೆ, ಎಸ್‌ಐಟಿ ಅಧಿಕಾರಿಗಳು ಟ್ರಸ್ಟ್‌ನ ಉನ್ನತ ಪದಾಧಿಕಾರಿಗಳನ್ನು ಸಿಲುಕಿಸದೆ ಕೇವಲ ಕೆಳಹಂತದ ಪದಾಧಿಕಾರಿಗಳನ್ನು ಮಾತ್ರ ಗುರುತಿಸಿದ್ದಾರೆ ಎಂದು ಅವರು ಕಿಡಿಕಾರಿದ್ದಾರೆ. ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯಾ ಧೀಶರ ನೇತೃತ್ವದ ಸ್ವತಂತ್ರ ತನಿಖೆಯಿಂದ ಮಾತ್ರ ರಾಮಮಂದಿರದ ಲೂಟಿಯ ಪ್ರಮಾಣ ಪತ್ತೆಹಚ್ಚಲು ಸಾಧ್ಯ ಎಂದಿದ್ದಾರೆ.

**ರಾಮ ಮಂದಿರದಲ್ಲಿ ಭೀಕರ ಲೂಟಿ**

ರಾಮ ಮಂದಿರದಲ್ಲಿ ದೇಣಿಗೆ ಮತ್ತು ಕಾಣಿಕೆಗಳ ಭೀಕರ ಲೂಟಿ ನಡೆದಿದೆ ಎಂದು ಕಾಂಗ್ರೆಸ್ ಹಿರಿಯ ನಾಯಕ ರಾಜೀವ್ ಶುಕ್ಲಾ ಅವರು ಪ್ರತಿಪಾದಿಸಿದ್ದಾರೆ. ಶ್ರೀರಾಮನ ಮೇಲಿನ ನಂಬಿಕೆಯಿಂದ ಜನರು ನೀಡಿದ ದೇಣಿಗೆಗಳನ್ನು ವಿಶೇಷವಾಗಿ ಹಳ್ಳಿಗಳ ಮತ್ತು ಸಮಾಜದ ಬಡ ವರ್ಗದವರಿಂದ ಸಂಗ್ರಹಿಸಿದ ಹಣವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ. ನಿಜವಾದ ತಪ್ಪಿತಸ್ಥರ ಬದಲಿಗೆ ಕೆಳಹಂತದ ನೌಕರರನ್ನು ಗುರಿಯಾಗಿಸಲಾಗುತ್ತಿದೆ ಎಂದು ಅವರು ಆರೋಪಿಸಿದ್ದಾರೆ. ಪ್ರಕರಣದಲ್ಲಿ ಹಿರಿಯ ಅಧಿಕಾರಿಗಳು ಶಾಮೀಲು ಆಗಿಲ್ಲದಿದ್ದರೆ, ಕೇವಲ ಕೆಳಹಂತದ ಉದ್ಯೋಗಿಯೊಬ್ಬ ಸಿಸಿಟಿವಿ ಕ್ಯಾಮರಾಗಳನ್ನು ಆಫ್ ಮಾಡಿ ಇಷ್ಟೊಂದು ದೊಡ್ಡ ಮೊತ್ತವನ್ನು ಕದಿ ಯಲು ಸಾಧ್ಯವೇ ಎಂಬುದು ತನಿಖೆಯಾಗ ಬೇಕಾದ ವಿಷಯ ಎಂದಿದ್ದಾರೆ.

ರಾಮ ಮಂದಿರಕ್ಕೆ ಬಂದಿರುವ ನಗದು, ಕಾಣಿಕೆಗಳನ್ನು ಕಡಿಮೆ ಪ್ರಮಾಣದಲ್ಲಿ ತೋರಿಸಲಾಗಿದೆ. ಮಹಿಳೆಯರು ಅರ್ಪಿಸಿದ ಚಿನ್ನಾಭರಣಗಳಿಗೆ ಸೂಕ್ತ ದಾಖಲೆಗಳಿಲ್ಲ. ಇದು ಜನರ ಧಾರ್ಮಿಕ ನಂಬಿಕೆಗೆ ಮಾಡಿದ ದ್ರೋಹ ಎಂದಿದ್ದಾರೆ. ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರು ದೇವಾಲಯದ ಟ್ರಸ್ಟ್‌ಗಳ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ದೇಣಿಗೆ ಹಾಗೂ ಕಾಣಿಕೆಗಳನ್ನು ರಾಜಕೀಯ ಉದ್ದೇಶಗಳಿಗಾಗಿ ಬಳಸಲು ಉದ್ದೇಶಿಸಿದ್ದಾರೆಂದು ಶುಕ್ಲಾ ದೂರಿದ್ದಾರೆ.

**8 ಜನರ ಬಂಧನ**

ರಾಮ ಮಂದಿರಕ್ಕೆ ಬಂದ ದೇಣಿಗೆ ದುರುಪಯೋಗಪಡಿಸಿಕೊಂಡ ಆರೋಪಕ್ಕೆ ಸಂಬಂಧಿಸಿ ಉತ್ತರ ಪ್ರದೇಶ ಪೊಲೀಸರು 8 ಆರೋಪಿಗಳನ್ನು ಶುಕ್ರವಾರ ಬಂಧಿಸಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿರುವ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ಸನಾತನ ಧರ್ಮ ಹಾಗು ಸಾರ್ವಜನಿಕರ ಧಾರ್ಮಿಕ ನಂಬಿಕೆಗಳೊಂದಿಗೆ ಆಟವಾಡುವವರ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಅಯೋಧ್ಯೆಯು ಸಾರ್ವಜನಿಕರ ಮತ್ತು ಸನಾತನ ಧರ್ಮದ ಅಪಾರ ನಂಬಿಕೆಯ ಸಂಕೇತವಾಗಿದೆ. ಯಾರೂ ಅಯೋಧ್ಯೆಯತ್ತ ವಕ್ರದೃಷ್ಟಿ ಬೀರಬಾರದು. ಶ್ರೀರಾಮನನ್ನು ಗೌರವಿಸುವುದನ್ನು ಕಲಿಯಿರಿ. ಈ ಹಗರಣದ ತನಿಖೆಗಾಗಿ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ ಮತ್ತು ಅದರ ವರದಿ ಬಂದ ತಕ್ಷಣ ಕಠಿಣ ಕ್ರಮ ತೆಗೆದುಕೊಳ್ಳಲಿದ್ದೇವೆ ಎಂದು ನಾವು ಮೊದಲೇ ಹೇಳಿದ್ದೇವು ಎಂದು ನೆನಪಿಸಿದರು.

ಈ ಪ್ರಕರಣದಲ್ಲಿ ಸತ್ಯ ಮತ್ತು ಸುಳ್ಳನ್ನು ನಾವು ಸಂಪೂರ್ಣವಾಗಿ ಬೇರ್ಪಡಿಸಿ ಸಾರ್ವಜನಿಕರ ಮುಂದೆಇಡಲಿದ್ದೇವೆ. ಸಾರ್ವಜನಿಕರ ಧಾರ್ಮಿಕ ಭಾವನೆಗಳೊಂದಿಗೆ ಆಟವಾಡುವುದನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ. ಯಾರೇ ಆಗಲಿ ಸನಾತನ ಧರ್ಮದ ಪವಿತ್ರ ನಂಬಿಕೆಯನ್ನು ಕೆಡಿಸಲು ಅಥವಾ ಅದರೊಂದಿಗೆ ತಮಾಷೆ ಮಾಡಲು ಯತ್ನಿಸಿದರೆ, ಅವರು ಅದರ ಭೀಕರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಇಂತಹ ದೇಶದ್ರೋಹಿ ಮತ್ತು ಧರ್ಮದ್ರೋಹಿ ಕೆಲಸ ಮಾಡುವ ಯಾರಿಗೇ ಆದರೂ ಯಾವುದೇ ರೀತಿಯ ವಿನಾಯಿತಿಯನ್ನು ನೀಡಲು ಸಾಧ್ಯವೇ ಇಲ್ಲ ಎಂದು ಎಚ್ಚರಿಸಿದ್ದಾರೆ.

## ತನಿಖಾ ತಂಡದೊಂದಿಗೆ ಸಮಾಲೋಚಿಸಿ ವರದಿ ಸಲ್ಲಿಕೆ

» ಮೊದಲನೇ ಪುಟದಿಂದ

ವಾದ ಮಂಡಿಸಿ ರಾಜ್ಯದ ರೈತರ ಹಿತ ಕಾಪಾಡುವ ಕೆಲಸವನ್ನು ಸರ್ಕಾರ ಮಾಡಬೇಕೆಂಬ ನಿರೀಕ್ಷೆ ಇದೆ. ಕಾದು ನೋಡೋಣವೆಂದರು.

**ಅಸಮಾಧಾನ ಬದಿಗಿಟ್ಟು ಸಮಸ್ಯೆಗೆ ಸ್ಪಂದಿಸಲಿ**

ಸಚಿವ ಸಂಪುಟ ವಿಸ್ತರಣೆ ಮತ್ತು ಸಚಿವ ಸ್ಥಾನಕ್ಕಾಗಿ ನಡೆಯುತ್ತಿರುವ ಚಟುವಟಿಕೆಗಳ ಕುರಿತು ಮಾತನಾಡಿದ ಅವರು, ಸಚಿವ ಸಂಪುಟದ ವಿಸ್ತರಣೆ ಇನ್ನೂ ಪೂರ್ಣಗೊಂಡಿಲ್ಲ. ರಾಜ್ಯದಲ್ಲಿ ಬರಗಾಲದ ಸಾಧ್ಯತೆ ಇರುವುದರಿಂದ ಗೊಬ್ಬರ ಕೊರತೆ ಆಗದಂತೆ, ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಈಗಾಗಲೇ ನಾವು ಒತ್ತಾಯಿಸಿದ್ದೇವೆ. ಮುಖ್ಯಮಂತ್ರಿ ಸಚಿವರಿಗೆ ಜವಾಬ್ದಾರಿ ನೀಡಿದ್ದಾರೆ. ಆದರೆ, ಇನ್ನೂ ಕೆಲವು ಸಚಿವರು ತಮ್ಮ ಖಾತೆಗಳ ಅಸಮಾಧಾನದಲ್ಲೇ ಇದ್ದಾರೆ. ಇದನ್ನೆಲ್ಲ ಬದಿಗಿಟ್ಟು ರೈತರ ಸಂಕಷ್ಟಕ್ಕೆ ಸ್ಪಂದಿಸಬೇಕು ಎಂದು ಆಗ್ರಹಿಸಿದರು.

ಗೃಹಲಕ್ಷ್ಮಿ ಯೋಜನೆಯಡಿ ನೂರಾರು ಕೋಟಿ ರೂಪಾಯಿ ದುರುಪಯೋಗವಾಗುತ್ತಿದೆ. ಗ್ಯಾರಂಟಿ ಸಮಿತಿ ಅಧ್ಯಕ್ಷರಿದ್ದರೂ ಫಲಾನುಭವಿಗಳಿಗೆ ಹಣ ಸರಿಯಾಗಿ ತಲುಪುತ್ತಿಲ್ಲ. ಇದು ಸರ್ಕಾರದ ವೈಫಲ್ಯವೆಂದು ಆರೋಪಿಸಿದ ಅವರು, ಅಯೋಧ್ಯೆ ರಾಮಮಂದಿರದಲ್ಲಿ ಹಣ ದುರುಪಯೋಗವಾಗಿದೆ ಎಂಬ ಕಾಂಗ್ರೆಸ್ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿ, ರಾಜ್ಯದಲ್ಲಿ ಮಾಡಲು ಬೇಕಾದಷ್ಟು ಕೆಲಸಗಳಿವೆ. ಅವುಗಳ ಬಗ್ಗೆ ಗಮನ ಹರಿಸಲಿ ಎಂದುತಿರುಗೇಟು ನೀಡಿದರು.

**ಕಾರ್ಯಕರ್ತರಿಂದ ಅದ್ಧೂರಿ ಸ್ವಾಗತ**

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಆಲೂರಿನಲ್ಲಿ ನಡೆದ ಹಿಂದೂಪರ ಕಾರ್ಯಕರ್ತ ಪುನೀತ್ ಕೆರೆಹಳ್ಳಿ ಅವರ ಸಹೋದರನ ವಿವಾಹ ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದ್ದ ವಿಜಯೇಂದ್ರ ಅವರನ್ನು ಕಾರ್ಯಕರ್ತರು ಪಟಾಕಿ ಸಿಡಿಸಿ, ಜೆಸಿಬಿ ಮೂಲಕ ಹೂಮಳೆ ಗೈದು ಬರಮಾಡಿಕೊಂಡರು. ವಿವಾಹ ಸಮಾರಂಭದಲ್ಲಿ ಮಾಜಿ ಸಚಿವ ಸಿ.ಟಿ. ರವಿ ಹಾಗು ಬಿ.ವೈ.ವಿಜಯೇಂದ್ರ ಮುಖಾಮುಖಿಯಾದರು. ಈ ವೇಳೆ ಇಬ್ಬರೂ ಕೆಲಕಾಲ ಮಾತುಕತೆ ನಡೆಸಿ ದರು. ಶಾಸಕರಾದ ಸಿಮೆಂಟ್ ಮಂಜು, ಹೆಚ್.ಕೆ.ಸುರೇಶ್ ಹಾಗು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಜೆ. ಗೌಡಸೇರಿ ಬಿಜೆಪಿ ಮುಖಂಡರು ವಿಜಯೇಂದ್ರ ಅವರಿಗೆ ಸಾಥ್ ನೀಡಿದರು.

## ಅಭಿನಂದನಾ ಸಮಾರಂಭ: ಇಂದು ಪೂರ್ವಭಾವಿ ಸಭೆ

• ಪ್ರಜೋದಯ ವರದಿ

**ಹಾಸನ:** ಸಾಮಾಜಿಕ ಹೋರಾಟಗಾರ ಡಾ.ವೈ.ಎಸ್.ವೀರಭದ್ರಪ್ಪ ಅವರ ಸಾಮಾಜಿಕ ಹೋರಾಟ, ಜನಪರ ಸೇವೆ ಹಾಗೂ ಬದುಕಿನ ಸಾಧನೆಯನ್ನು ದಾಖಲಿಸುವ ಅಭಿನಂದನಾ ಗ್ರಂಥ ಬಿಡುಗಡೆ ಮಾಡುವ ಸಂಬಂಧ ಅಂತಿಮ ಸಿದ್ಧತೆಗಳ ಕುರಿತಾಗಿ ಜೂ.27ರ ಶನಿವಾರ ಸಂಜೆ 5 ಗಂಟೆಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ.

ವೀರಭದ್ರಪ್ಪ ಅವರು ಹಲವು ದಶಕಗಳಿಂದ ಸಾಮಾಜಿಕ ಕಳಕಳಿ, ಜನಪರ ಹೋರಾಟಗಳು ಹಾಗೂ ವಿವಿಧ ಸಾರ್ವಜನಿಕ ವಿಚಾರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸಮಾಜಮುಖಿ ಕಾರ್ಯಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಅವರ ಸೇವೆ ಮತ್ತು ಕೊಡುಗೆಯನ್ನು ಗೌರವಿಸುವ ಉದ್ದೇಶದಿಂದ ಜುಲೈ 12ರಂದು ಅಭಿನಂದನಾ ಸಮಾರಂಭ ಹಾಗೂ ಅಭಿನಂದನಾ ಗ್ರಂಥ ಬಿಡುಗಡೆ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಲಾಗಿದೆ.

ಸಭೆಗೆ ವೀರಭದ್ರಪ್ಪ ಅವರ ಹಿತೈಷಿಗಳು, ಸಾಹಿ ತ್ಯಾಸಕ್ತರು, ವಿವಿಧ ಸಂಘಟನೆಗಳ ಮುಖಂಡರು, ಸಾಮಾಜಿಕ ಕಾರ್ಯಕರ್ತರು ಹಾಗೂ ವೀರಭದ್ರಪ್ಪ ಅವರ ಅಭಿಮಾನಿಗಳು ಮತ್ತು ಸ್ನೇಹಿತರು ಭಾಗವಹಿಸಿ ತಮ್ಮ ಸಲಹೆ-ಸಹಕಾರ ನೀಡುವಂತೆ ಅಭಿನಂದನಾ ಸಮಿತಿ ಸದಸ್ಯರು ಮನವಿ ಮಾಡಿದ್ದಾರೆ.

## ಇಂದು ಕೃಷಿ ಸಾಧಕರ ಸಮಾಲೋಚನಾ ಕಾರ್ಯಾಗಾರ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ನಾಡಪ್ರಭು ಕೆಂಪೇಗೌಡರ ಜಯಂತಿ ಪ್ರಯುಕ್ತ ಜೂ.27ರ ಶನಿವಾರ ಬೆಳಿಗ್ಗೆ 10.30 ಗಂಟೆಗೆ ಕೃಷಿ ಸಾಧಕರ ಸಮಾಲೋಚನಾ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಸಾವಯವ ಕೃಷಿಕ ಹೆಚ್.ಪಿ. ರಾಜು ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿರೀಸಾವೆ ಗ್ರಾಮದ ಸುವರ್ಚಲಾದೇವಿ ಕಲ್ಯಾಣ ಮಂಟಪದಲ್ಲಿ ಕೃಷಿ ಇಲಾಖೆ, ರೈತ ಸಂಘ, ಕಾಡು ಕೃಷಿ ಕುಟುಂಬ ಹಾಗು ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ರೈತರಿಂದ, ರೈತರಿಗಾಗಿ, ರೈತರಿಗೋಸ್ಕರ ಹಾಗು ರೈತರ ಉಳಿವಿಗಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಾಗಾರಕ್ಕೂ ಮೊದಲು ನಾಡಪ್ರಭು ಕೆಂಪೇಗೌಡ ವೃತ್ತದಲ್ಲಿ ಕೆಂಪೇಗೌಡ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯೊಂದಿಗೆ ವಿಶೇಷ ಪೂಜೆ ಸಲ್ಲಿಸಲಾಗುವುದು. ಕೃಷಿ ಸಾಧಕರಾದ ಸಿ.ಡಿ.ಕುಮಾರ್, ಹೀರತ್ತಿಗೌಡ, ಸೋಮಣ್ಣ, ಬಳದರೆ ಮಂಜು ಸೇರಿ ಪ್ರಮುಖ ಸಾವಯವ ಕೃಷಿ ಸಾಧಕರು ಮತ್ತು ಕೃಷಿ ಸಂಶೋಧಕರು ಪಾಲ್ಗೊಳ್ಳಲಿದ್ದಾರೆ. ಕಾಡು ಕೃಷಿ, ಯುವ ಸಮುದಾಯವನ್ನು ಕೃಷಿಯತ್ತ ಸೆಳೆಯುವ ಹಾಗು ಸರ್ಕಾರದ ಗಮನ ಸೆಳೆಯುವ ಬಗ್ಗೆ ಸಂವಾದ ನಡೆಯಲಿದೆ ಎಂದರು.

ಹೋಬಳಿ ವ್ಯಾಪ್ತಿಯ ಸುಮಾರು 300ಕ್ಕೂ ಹೆಚ್ಚು ರೈತರು ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲಿ ದ್ದಾರೆ. ರೈತರಿಂದ, ರೈತರಿಗಾಗಿ, ರೈತರಿಗೋಸ್ಕರ ಹಾಗು ರೈತರ ಬದುಕಿನ ಉಳಿವಿಗಾಗಿ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

# ಗ್ಯಾರಂಟಿ ಯೋಜನೆ ಅನುಷ್ಠಾನದಲ್ಲಿ ಭಾರೀ ಅಕ್ರಮ

## ಹಗಲು ದರೋಡೆ ನಡೆಸುತ್ತಿರುವ ಸಮಿತಿ ರದ್ದುಪಡಿಸಿ | ಹೆಚ್.ಕೆ.ಕುಮಾರಸ್ವಾಮಿ ಆಗ್ರಹ

• ಪ್ರಜೋದಯ ವರದಿ




**ಹಾಸನ:** ಕಾಂಗ್ರೆಸ್ ಕಾರ್ಯಕರ್ತರಿಗೆ ಉದ್ಯೋಗ ನೀಡಲು, ಹಗಲು ದರೋಡೆ ನಡೆಸಲು ರಚಿಸಿರುವ ಗ್ಯಾರಂಟಿ ಅನುಷ್ಠಾನ ಸಮಿತಿಯನ್ನು ಸರ್ಕಾರ ರದ್ದುಪಡಿಸಬೇಕೆಂದು ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ ಅವರು ಒತ್ತಾಯಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಭಾರೀ ಅಕ್ರಮ, ಅವ್ಯವಹಾರ ನಡೆದಿರುವ ಬಗ್ಗೆ ಸಿಐಜೆ ಬಹಿರಂಗಪಡಿಸಿದೆ. ಕಳೆದ ಮೂರು ವರ್ಷಗಳಿಂದ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಕೋಟ್ಯಾಂತರ ರೂ. ಅಕ್ರಮ ನಡೆದಿರುವ ಆರೋಪಗಳು ಕೇಳಿ ಬಂದಿವೆ ಎಂದು ದೂರಿದರು.

ಸರ್ಕಾರದ ಸಂಬಂಧಪಟ್ಟ ಸಚಿವರು, ರಾಜ್ಯ, ಜಿಲ್ಲಾ ಹಾಗು ತಾಲ್ಲೂಕು ಮಟ್ಟದ ಗ್ಯಾರಂಟಿ ಸಮಿತಿಗಳಿದ್ದರೂ ಇಂತಹ ಅವ್ಯವಹಾರಗಳು ನಡೆಯಲು ಅವಕಾಶ ನೀಡಿರುವುದು ಆಡಳಿತ ವೈಫಲ್ಯಕ್ಕೆ ಸಾಕ್ಷಿಯಾಗಿದೆ. ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ಹೊಂದಿರುವ ಗ್ಯಾರಂಟಿ ಸಮಿತಿ ಅಧ್ಯಕ್ಷರು ಹಾಗು ಇತರ ಪದಾಧಿಕಾರಿಗಳು ಮೇಲ್ವಿಚಾರಣೆ ನಡೆಸದೆ ರಾಜಕೀಯ ಉದ್ದೇಶಗಳಿಗಾಗಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮ ಹಾಗು ವಾರ್ಡ್ ಮಟ್ಟಕ್ಕೂ ಸಮಿತಿಗಳನ್ನು ವಿಸ್ತರಿಸುವ ಸರ್ಕಾರದ ನಿರ್ಧಾರವನ್ನು ಕೈಬಿಟ್ಟು, ಈಗಿರುವ ಸಮಿತಿಯನ್ನೇ ವಿಸರ್ಜಿಸಬೇಕೆಂದು ಒತ್ತಾಯಿಸಿದರು.

ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ 52 ಸಾವಿರ ಕೋಟಿ ವೆಚ್ಚ ಮಾಡುತ್ತಿರುವುದಾಗಿ ಹೇಳಿಕೊಳ್ಳುತ್ತಿದೆ. ಆದರೆ, ವಿವಿಧ ವಸ್ತುಗಳ ಬೆಲೆ ಏರಿಕೆಯಿಂದ ಸರ್ಕಾರಕ್ಕೆ 71 ಸಾವಿರ ಕೋಟಿ ಹೆಚ್ಚುವರಿ ಆದಾಯ ಬಂದಿದ್ದು, ಸುಮಾರು 19 ಸಾವಿರ ಕೋ.ರೂ. ಉಳಿಕೆಯಾಗಿದೆ. ಸಾರ್ವಜನಿಕರ ಹಣವನ್ನು ದುರುಪಯೋಗಪಡಿಸಿಕೊಳ್ಳಲು ಗ್ಯಾರಂಟಿ ಸಮಿತಿಗಳನ್ನು ಬಳಸಲಾಗುತ್ತಿದೆಂದು ಆರೋಪಿಸಿದರು.

ಗ್ಯಾರಂಟಿ ಯೋಜನೆಗಳಲ್ಲಿ ನಡೆದಿರುವ ಅಕ್ರಮಗಳ ಕುರಿತು ಜಿಲ್ಲಾಧಿಕಾರಿಗಳು ಫಲಾನುಭವಿಗಳ ಸಂಖ್ಯೆ, ಹಣದ ವಿತರಣೆ, ಮೃತಪಟ್ಟವರಿಗೂ ಹಣ ಜಮೆಯಾಗಿರುವ ಪ್ರಕರಣಗಳು ಸೇರಿ ಎಲ್ಲಾ ಮಾಹಿತಿಯನ್ನು ಅಂಕಿ-ಅಂಶಗಳೊಂದಿಗೆ ಬಹಿರಂಗಪಡಿಸಬೇಕು. ತಪ್ಪಿತಸ್ಥ ಅಧಿಕಾರಿಗಳು ಹಾಗು ಗ್ಯಾರಂಟಿ ಸಮಿತಿ ಪದಾಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಗ್ಯಾರಂಟಿ ಸಮಿತಿಗಳು ಜನಸೇವೆಗೆ ಬದಲಾಗಿ ರಾಜಕೀಯ ನೇಮಕಾತಿಗಳಾಗಿ ಮಾರ್ಪಟ್ಟಿವೆ. ಕಾಂಗ್ರೆಸ್ ಪಕ್ಷಕ್ಕೆ ಹೊಸ ಸದಸ್ಯರನ್ನು ಸೆಳೆಯುವ ಉದ್ದೇಶದಿಂದ ಈ ಸಮಿತಿಗಳನ್ನು ಬಳಸಲಾಗುತ್ತಿದೆ. ಮುಖ್ಯಮಂತ್ರಿ ಭ್ರಷ್ಟಾಚಾರ ಮುಕ್ತ ಕರ್ನಾಟಕ ನಿರ್ಮಾಣದ ಮಾತುಗಳನ್ನಾಡುತ್ತಿರುವುದನ್ನು ಸ್ವಾಗತಿಸುತ್ತೇವೆ. ಆದರೆ, ಮೊದಲು ಗ್ಯಾರಂಟಿ ಯೋಜನೆಗಳಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿದರು.

**ಬಿಡದಿ ಟೌನ್‌ಶಿಪ್‌ಗೆ ವಿರೋಧ**

ಬಿಡದಿಯಲ್ಲಿ ಫಲವತ್ತಾದ ಕೃಷಿ ಭೂಮಿಯನ್ನು ವಶಪಡಿಸಿಕೊಂಡು ಟೌನ್‌ಶಿಪ್ ನಿರ್ಮಿಸಲು ಮುಂದಾಗಿರುವುದು ಖಂಡನೀಯ. ರೈತರ ಪರವಾಗಿ ಮಾಜಿ ಮುಖ್ಯಮಂತ್ರಿ ಹಾಗು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಧ್ವನಿ ಎತ್ತಿರುವುದು ಸಮಂಜಸವಾಗಿದೆ. ಈ ವಿಚಾರದಲ್ಲಿ ನಿಖಿಲ್ ಕುಮಾರಸ್ವಾಮಿ ಹಾಗು ಅನಿತಾ ಕುಮಾರಸ್ವಾಮಿ ವಿರುದ್ಧ ಪೋಸ್ಟರ್ ಅಂಟಿಸಿರುವ ಕೃತ್ಯವನ್ನು ಜೆಡಿಎಸ್ ಪಕ್ಷ ಖಂಡಿಸುತ್ತದೆ ಎಂದರು.

**ಕಾಲೇಜು ಚುನಾವಣೆ ಬೇಡ**

ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಸೌಹಾರ್ದಯುತ ವಾತಾವರಣದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ವಿದ್ಯಾರ್ಥಿ ಚುನಾವಣೆಗಳನ್ನು ಮರುಜಾರಿಗೆ ತರಲು ಸರ್ಕಾರ ಮುಂದಾಗಬಾರದು. ವಿದ್ಯಾರ್ಥಿಗಳ ಮನಸ್ಸಿನಲ್ಲಿ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬಿತ್ತುವ ಬದಲು ಶಿಕ್ಷಣದ ಕಡೆ ಗಮನ ಹರಿಸುವಂತಾಗಬೇಕು ಎಂದು ಹೇಳಿದರು.

## ಆರ್‌ಎಸ್‌ಎಸ್ ಟೀಕೆಯಿಂದ ನಾಯಕತ್ವ ಬರುವುದಿಲ್ಲ

» ಮೊದಲನೇ ಪುಟದಿಂದ

ಘಟನೆಗಳ ಬಗ್ಗೆ ಗೃಹಸಚಿವರು ಧ್ವನಿ ಎತ್ತಲಿಲ್ಲ. ಆರ್‌ಎಸ್‌ಎಸ್ ಬಗ್ಗೆ ನಿರಂತರ ಟೀಕೆ ಮಾಡುವುದನ್ನು ಬಿಟ್ಟು ಕಾನೂನು ಸುವ್ಯವಸ್ಥೆ ಕಾಪಾಡುವತ್ತ ಗಮನ ಹರಿಸಬೇಕು. ಕೇವಲ ಬಾಯಿಮಾತಿನಿಂದ ನಾಯಕತ್ವ ಸಾಬೀತಾಗುವುದಿಲ್ಲವೆಂದು ಹೇಳಿದರು.

**ಜಮೀನನ್ನು ಕಿತ್ತುಕೊಳ್ಳುವುದು ಸರಿಯಲ್ಲ**

ಬಿಡದಿ ಟೌನ್‌ಶಿಪ್ ಹಾಗು ಭೂ ಸ್ವಾಧೀನ ವಿವಾದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ರೈತರ ಒಪ್ಪಿಗೆ ಇಲ್ಲದೆ ಭೂಮಿ ಸ್ವಾಧೀನ ಪಡಿಸಿಕೊಳ್ಳುವುದು ಸರಿಯಲ್ಲ. ನಾಗ ಮಂಗಲದಲ್ಲಿ ವಿಮಾನ ನಿಲ್ದಾಣ ನಿರ್ಮಿಸುವ ಉದ್ದೇಶ ಸ್ವಾಗತಾರ್ಹವಾದರೂ, ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರಿ ಅಥವಾ ಬಂಜರು ಭೂಮಿಗೆ ಆದ್ಯತೆ ನೀಡ ಬೇಕೆಂದರು.

ವಿಮಾನ ನಿಲ್ದಾಣ ನಿರ್ಮಾಣವಾದರೆ ಸಹಜವಾಗಿಯೇ ಅಭಿವೃದ್ಧಿಯಾಗುತ್ತದೆ. ಕೈಗಾರಿಕೆ ಸ್ಥಾಪನೆಗೆ ರಾಮನಗರ ಭಾಗದಲ್ಲಿ ಸರ್ಕಾರಿ ಅಥವಾ ಬಂಜರು ಭೂಮಿ ಇರುವ ಕಡೆ ಯೋಜನೆ ರೂಪಿಸಬೇಕು. ರಿಯಲ್ ಎಸ್ಟೇಟ್ ಉದ್ಯಮಿಗಳು ಮಾಡುವ ಕೆಲಸವನ್ನು ಸರ್ಕಾರ ಮಾಡುವ ಅಗತ್ಯವಿಲ್ಲ. ರೈತರು ಸ್ವಇಚ್ಛೆಯಿಂದ ಭೂಮಿ ನೀಡಿದರೆ ಸ್ವಾಗತ. ಆದರೆ, ಅಧಿಕಾರದ ಬಲದಿಂದ ಅವರ ಜಮೀನನ್ನು ಕಿತ್ತುಕೊಳ್ಳುವುದು ಸರಿಯಲ್ಲವೆಂದರು.

**ರೈತರ ಅಭಿಪ್ರಾಯ ಗೌರವಿಸಿ**

ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ರೈತರೊಂದಿಗೆ ಚರ್ಚೆಗೆ ಆಹ್ವಾನಿಸಿರುವುದನ್ನು ಉಲ್ಲೇಖಿಸಿದ ಅವರು, ರೈತರ ಮನವೊಲಿಸಿದರೆ ಅವರು ನಿಮ್ಮ ಪರ ನಿಲ್ಲುತ್ತಾರೆ. ಅವರೊಂದಿಗೆ ಚರ್ಚೆ ನಡೆಸಲು ಏನು ಸಮಸ್ಯೆ. ವಿಧಾನ ಸೌಧದಲ್ಲೇ ಚರ್ಚೆ ಮಾಡುವ ಬದಲು ರೈತರ ಬಳಿಗೆ ಹೋಗಿ ಅವರ ಸಮಸ್ಯೆಗಳನ್ನು ಆಲಿಸಬೇಕು. 1989ರಿಂದ ನಿಮ್ಮನ್ನು ಗೆಲ್ಲಿಸುತ್ತಿರುವ ರೈತರ ಅಭಿಪ್ರಾಯವನ್ನು ಗೌರವಿಸಬೇಕೆಂದು ಹೇಳಿದರು.

ಕುಮಾರಸ್ವಾಮಿ ಅವರು ಕರೆದಿರುವಂತೆ ಇಬ್ಬರೂ ಕುಳಿತು ರೈತರ ಮಾತು ಕೇಳಬೇಕು. ರೈತರು ಇಚ್ಛೆಯಿಂದ ಭೂಮಿ ನೀಡಿದರೆ ಪಡೆಯಿರಿ, ಇಲ್ಲದಿದ್ದರೆ ಆ ಯೋಚನೆಯನ್ನು ಕೈಬಿಡಿ. ಕೈಗಾರಿಕೆ ಅಭಿವೃದ್ಧಿಗೆ ಒತ್ತು ನೀಡಿ, ರೈತರಿಗೆ ಅದರಲ್ಲಿ ಪಾಲುದಾರಿಕೆ ಕಲ್ಪಿಸಿ. ನಾನು ಮಾಡಿಯೇ ತೀರುತ್ತೇನೆ ಎನ್ನುವ ಸರ್ವಾಧಿಕಾರಿ ಧೋರಣೆ ಪ್ರಜಾಪ್ರಭುತ್ವದಲ್ಲಿ ಸಲ್ಲದದೆಂದು ಹೇಳಿದರು.

ನಾನು ಅಭಿವೃದ್ಧಿಯ ವಿರೋಧಿಯಲ್ಲ. ವಿರೋಧದ ನಡುವೆಯೂ ಬೆಂಗಳೂರು-ಮಂಗಳೂರು ಹೆದ್ದಾರಿ ಕಾಮಗಾರಿಗೆ ಬೆಂಬಲ ನೀಡಿದ್ದೇನೆ. ರೈತರ ಇಚ್ಛೆಗೆ ವಿರುದ್ಧವಾಗಿ ಭೂಮಿ ಸ್ವಾಧೀನಪಡಿಸಿಕೊಳ್ಳುವುದು ತಪ್ಪು ಎಂದರು.

## ಅಕ್ರಮ ಸಾಗಾಟ: 1.50 ಲಕ್ಷ ರೂ. ಮೌಲ್ಯದ ಅಕ್ಕಿ ವಶ



• ಪ್ರಜೋದಯ ವರದಿ

**ಹಾಸನ:** ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ 1.50 ಲಕ್ಷ ರೂ. ಮೌಲ್ಯದ 85 ಚೀಲ ಅಕ್ಕಿ ಯನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳು ತಾಲ್ಲೂಕಿನ ಶಾಂತಿ ಗ್ರಾಮ ಬಳಿ ಗುರುವಾರ ವಶಪಡಿಸಿಕೊಂಡಿದ್ದಾರೆ.

ಅನ್ನಭಾಗ್ಯ ಯೋಜನೆಯಡಿ ಬಡವರಿಗೆ ಉಚಿತವಾಗಿ ವಿತರಿಸಲಾಗುವ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿ ಸಾಗಾಟ ಮಾಡಲಾಗುತ್ತಿತ್ತು ಎನ್ನಲಾಗಿದೆ. ರಮೇಶ್ ಎಂಬುವವರು ಅಧಿಕಾರಿಗಳಿಗೆ ಕರೆ ಮಾಡಿ, ರಾಷ್ಟ್ರೀಯ ಹೆದ್ದಾರಿ 75ರ ಸ್ಕೈಬರ್ಡ್ ಹೋಟೆಲ್ ಸಮೀಪ ಪಿಕಪ್ ವಾಹನದಲ್ಲಿ ಅಕ್ರಮವಾಗಿ ಅಕ್ಕಿ ಸಾಗಿಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದರು. ತಾಲ್ಲೂಕು ಆಹಾರ ನಿರೀಕ್ಷಕ, ಶಿರಸ್ತೇದಾರ್ ಹಾಗು ಇಲಾಖೆಯ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿದಾಗ 50 ಕೆ.ಜಿ. ತೂಕದ 85 ಚೀಲ ಬಿಳಿ ಅಕ್ಕಿ ಹಾಗು ಹಳದಿ ಬಣ್ಣದ ಅಕ್ಕಿ ಪತ್ತೆಯಾಗಿದೆ.

ಅಕ್ಕಿಯನ್ನು ಪರಿಶೀಲಿಸಿದ ಅಧಿಕಾರಿಗಳು ಸರ್ಕಾರದ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ವಿತರಿಸುವ ಅನ್ನಭಾಗ್ಯ ಅಕ್ಕಿಯಂತೆಯೇ ಮೇಲ್ನೋಟಕ್ಕೆ ಕಂಡುಬಂದಿದ್ದು, ಅದರಲ್ಲಿ ಸಾರವರ್ಧಕ ಅಕ್ಕಿಯ ಮಿಶ್ರಣವೂ ಇರುವ ಲಕ್ಷಣ ಕಂಡುಬಂದಿವೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸ್ಥಳದಲ್ಲಿದ್ದ ವಾಹನ ಚಾಲಕ ಪೆನ್ಸನ್ ಮೊಹಲ್ಲಾದ ಸಯ್ಯದ್ ಸೂಚಿಯಾನ್ ಎನ್ನಲಾಗಿದೆ. ಸಾಗಿಸುತ್ತಿದ್ದ ಅಕ್ಕಿಗೆ ಸಂಬಂಧಿಸಿದ ಪರವಾನಗಿ ಅಥವಾ ಮಾಲೀಕತ್ವದ ದಾಖಲೆಗಳನ್ನು ಹಾಜರುಪಡಿಸಿಲ್ಲ. ಅಕ್ಕಿಯ ಮಾಲೀಕರು ಅಥವಾ ವಾರಸುದಾರರು ಸ್ಥಳದಲ್ಲಿರಲಿಲ್ಲ ಎಂದು ತಿಳಿದು ಬಂದಿದೆ.

ಸರ್ಕಾರಿ ಯೋಜನೆಯ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿ ಸಾಗಣೆ ಮಾಡಿರುವ ಶಂಕೆ ವ್ಯಕ್ತವಾಗಿದ್ದು, ವಾಹನ, ಅಕ್ಕಿ ಹಾಗು ಇತರೆ ದಾಖಲೆಗಳನ್ನು ಅಧಿಕಾರಿಗಳು ವಶಪಡಿಸಿ ಕೊಂಡಿದ್ದಾರೆ.

## ಎಲೈಟ್ ಶಾಲೆಯಲ್ಲಿ ವಿದ್ಯಾರ್ಥಿ ನಾಯಕರ ಪದಗ್ರಹಣ




• ಪ್ರಜೋದಯ ವರದಿ

**ಹಾಸನ:** ಹೇಮಾವತಿ ನಗರದಲ್ಲಿರುವ ಎಲೈಟ್ ಶಾಲೆಯಲ್ಲಿ 2026-27ನೇ ಸಾಲಿನ ವಿದ್ಯಾರ್ಥಿ ನಾಯಕರ ಪದಗ್ರಹಣ ಸಮಾರಂಭ ನಡೆಯಿತು.

ಶಾಲೆಯ ಆಡಳಿತ ಮಂಡಳಿ ಕಾರ್ಯದರ್ಶಿ ಹೆಚ್.ಪಿ.ಕಿರಣ್ ಅವರು ಮಾತನಾಡಿ, ವಿದ್ಯಾರ್ಥಿ ಜೀವನದಲ್ಲೇ ನಾಯಕತ್ವ ಗುಣ ಬೆಳೆಸಿಕೊಳ್ಳಬೇಕು. ಶಿಸ್ತು, ಸಮಯಪ್ರಜ್ಞೆ, ಭಾಷಾ ಕೌಶಲ, ನಡವಳಿಕೆ ನಮ್ಮನ್ನು ಉನ್ನತ ಮಟ್ಟಕ್ಕೆ ಕರೆದೊಯ್ಯುತ್ತವೆ. ವಿದ್ಯಾರ್ಥಿಗಳು ಸಮಯ ವ್ಯರ್ಥ ಮಾಡದೆ ವ್ಯಾಸಂಗದಲ್ಲಿ ತೊಡಗಬೇಕೆಂದು ಸಲಹೆ ನೀಡಿದರು.

ಖಜಾಂಚಿ ಸಪ್ನ ಕಿರಣ್ ಅವರು ಮಾತನಾಡಿ, ನಾಯಕರು ಶಾಲೆಯ ಇತರ ವಿದ್ಯಾರ್ಥಿಗಳಿಗೆ ಮಾದರಿಯಾಗಿ ನಡೆದುಕೊಳ್ಳಬೇಕು. ಶಿಸ್ತು ಹಾಗು ನಿಯಮಗಳನ್ನು ಪಾಲಿಸಬೇಕೆಂದು ತಿಳಿಸಿ ದರು. ವಿದ್ಯಾರ್ಥಿ ನಾಯಕರಾಗಿ ಆಯ್ಕೆಯಾದ ನಾಯಕಿ ಸಿ.ಕೆ.ಸಾರಿಕಾ ಮತ್ತು ಉಪನಾಯಕ ಜಿ.ಬಿ.ವರುಣ್ ಹೊಣೆ ವಹಿಸಿಕೊಂಡರು.

1ರಿಂದ 10ನೇ ತರಗತಿ ವರೆಗೆ ಆಯ್ಕೆಯಾದ ನಾಯಕರಿಗೆ ಬ್ಯಾಡ್ಜ್‌ಗಳನ್ನು ವಿತರಿಸಿ ಶುಭ ಹಾರೈಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಶಾಲೆಯ ಆಡಳಿತಾಧಿಕಾರಿಗಳು, ಪ್ರಾಂಶುಪಾಲ, ಶಾಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ ಹಾಗು ಪೋಷಕರು ಹಾಜರಿದ್ದರು.

## ಎದೆಯಲಿ ರಾಮ ಭಕ್ತಿಗೀತೆ ಬಿಡುಗಡೆ

• ಪ್ರಜೋದಯ ವರದಿ




**ಹಾಸನ:** ನಗರದ ರಾಷ್ಟ್ರೋತ್ಥಾನ ವಿದ್ಯಾ ಸಂಸ್ಥೆಯ ಶಿಕ್ಷಕ ಸಿ.ಎನ್.ನಾಗೇಶ್ ಅವರು ರಚಿಸಿರುವ ಎದೆಯಲಿ ರಾಮ ಎಂಬ ಗೀತೆಯನ್ನು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಶುಕ್ರವಾರ ಬಿಡುಗಡೆ ಮಾಡಲಾಯಿತು.

ಉದ್ಯಮಿ ಕಂಚಮಾರನಹಳ್ಳಿ ಕಾಂತರಾಜು ಅವರು ಮಾತನಾಡಿ, ಭಕ್ತಿ ಸಾಹಿತ್ಯ ಮತ್ತು ಸಂಗೀತದ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಚಿಂತನೆ ಬೆಳೆಸುವ ಉದ್ದೇಶದಿಂದ ರೂಪುಗೊಂಡಿರುವ ಈ ಗೀತೆ ಭಕ್ತರು ಹಾಗು ಸಂಗೀತಾಸಕ್ತರ ಗಮನ ಸೆಳೆಯಲಿದೆ. ಇಂದಿನ ವೇಗದ ಬದುಕಿನಲ್ಲಿ ಆಧ್ಯಾತ್ಮಿಕ ಚಿಂತನೆ ಮತ್ತು ನೈತಿಕ ಮೌಲ್ಯಗಳನ್ನು ಉಳಿಸಿಕೊಳ್ಳುವಲ್ಲಿ ಭಕ್ತಿ ಸಂಗೀತದ ಪಾತ್ರ ಮಹತ್ವದ್ದಾಗಿದೆ ಎಂದರು.

ಉತ್ತಮ ಸಂದೇಶ ಹೊಂದಿರುವ ಇಂತಹ ಹಾಡುಗಳು ಸಮಾಜಕ್ಕೆ ದಾರಿದೀಪವಾಗುವುದರ ಜೊತೆಗೆ ಯುವ ಪೀಳಿಗೆಯಲ್ಲಿ ಭಾರತೀಯ ಸಂಸ್ಕೃತಿ, ಭಕ್ತಿ ಮತ್ತು ಮೌಲ್ಯಗಳ ಬಗ್ಗೆ ಆಸಕ್ತಿ ಮೂಡಿಸುತ್ತವೆ. ಎದೆಯಲಿ ರಾಮ ಭಕ್ತಿ ಗೀತೆಯ ಸಾಹಿತ್ಯ, ಸಂಗೀತ ಸಂಯೋಜನೆ ಹಾಗು ಗಾಯನವನ್ನು ಸಿ.ಎನ್.ನಾಗೇಶ್ ಮಾಡಿದ್ದಾರೆ. ರಾಘವೇಂದ್ರ ಸ್ವಾಮಿ ಮೇಲಿನ ಅಚಲ ಭಕ್ತಿ, ರಾಮನಾಮದ ಶಕ್ತಿ ಹಾಗು ಧರ್ಮದ ಮಾರ್ಗದಲ್ಲಿ ನಡೆಯುವ ಬದುಕಿನ ಮಹತ್ವವನ್ನು ಹೃದಯಸ್ಪರ್ಶಿಯಾಗಿ ಹಾಡಿನ ಮೂಲಕ ಅಭಿವ್ಯಕ್ತಪಡಿಸಿದ್ದಾರೆಂದರು.

ಗಾಯಕ ಸಿ.ಎನ್.ನಾಗೇಶ್ ಅವರು ಮಾತನಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆಯಾಗಿದ್ದ ಟೀಸರ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಸಂಪೂರ್ಣ ವಿಡಿಯೋ ಬಿಡುಗಡೆ ಮಾಡಿದ್ದೇವೆ. ಈ ಮೊದಲು 21 ಹಾಡುಗಳನ್ನು ರಚಿಸಿದ್ದು ವಿಡಿಯೋ ಸಹಿತ ಬಿಡುಗಡೆಯಾಗುತ್ತಿರುವ ಮೊದಲ ಹಾಡು ಇದಾಗಿದೆ ಎಂದರು.

ಭಕ್ತಿ ಸಂಗೀತವು ಕೇವಲ ದೇವರ ಆರಾಧನೆಗೆ ಸೀಮಿತವಾಗದೆ ಸಮಾಜದಲ್ಲಿ ಮಾನವೀಯತೆ, ಸಹೋದರತ್ವ, ಧರ್ಮನಿಷ್ಠೆ ಮತ್ತು ಸಕಾರಾತ್ಮಕ ಚಿಂತನೆಗಳನ್ನು ಬೆಳೆಸುವ ಶಕ್ತಿಯಾಗಿದೆ. ಇದೇ ಉದ್ದೇಶದಿಂದ ಈ ಗೀತೆಯನ್ನು ರಚಿಸಲಾಗಿದೆ. ಎಲ್ಲಾ ವರ್ಗದ ಜನರು ಇಷ್ಟಪಡುವ ವಿಶ್ವಾಸವಿದೆ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ, ರವಿಕೀರ್ತಿ ಇದ್ದರು.

## ಆನೆ ಕಾರ್ಯಪಡೆಗೆ ದ್ವಿಚಕ್ರ ವಾಹನ ಹಸ್ತಾಂತರ

**ಸಕಲೇಶಪುರ:** ಕಾಡಾನೆಗಳ ಚಲನವಲನದ ಕುರಿತು ಸಾರ್ವಜನಿಕರಿಗೆ ಸಮಯೋಚಿತ ಮಾಹಿತಿ ನೀಡುವ ಉದ್ದೇಶದಿಂದ ಜಿಲ್ಲಾ ಆನೆ ಕಾರ್ಯಪಡೆಗೆ ನೀಡಲಾದ ಎರಡು ದ್ವಿಚಕ್ರ ವಾಹನಗಳನ್ನು ವಲಯ ಅರಣ್ಯಾಧಿಕಾರಿ ಹೇಮಂತ್ ಅವರು ಇಟಿಎಫ್ ಸಿಬ್ಬಂದಿಗೆ ಶುಕ್ರವಾರ ಹಸ್ತಾಂತರಿಸಿದರು.

ಹಾಸನ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಏಡುಕೊಂಡಲು, ಹಾಸನ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್ ಹಾಗು ಸಕಲೇಶಪುರ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಧುಸೂಧನ್ ಅವರ ನಿರ್ದೇಶನದಂತೆ ಜಿಲ್ಲಾ ಆನೆ ಕಾರ್ಯಪಡೆ ವತಿಯಿಂದ ಸಕಲೇಶಪುರ ವಲಯಕ್ಕೆ ಎರಡು ದ್ವಿಚಕ್ರ ವಾಹನಗಳನ್ನು ಒದಗಿಸ ಲಾಗಿದೆ. ಈ ವಾಹನಗಳಿಗೆ ಪೂಜೆ ಸಲ್ಲಿಸಿದ ಬಳಿಕ ಬೆಳಗೋಡು ಹಾಗು ಬ್ಯಾಕರವಳ್ಳಿ ಶಾಖೆಗಳ ಉಪವಲಯ ಅರಣ್ಯಾಧಿಕಾರಿಗಳಿಗೆ ಹಸ್ತಾಂತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ವಲಯ ಅರಣ್ಯಾಧಿಕಾರಿ ಹೇಮಂತ್ ಅವರು, ಆನೆಗಳು ಕಾಣಿಸಿಕೊಳ್ಳುವ ಪ್ರದೇಶಗಳಲ್ಲಿ ತ್ವರಿತವಾಗಿ ಸ್ಥಳಕ್ಕೆ ತೆರಳಿ ಸಾರ್ವಜನಿಕರಿಗೆ ಮುನ್ನೆಚ್ಚರಿಕೆ ನೀಡುವುದು ಹಾಗು ಆನೆಗಳ ಚಲನವಲನದ ಕುರಿತು ಸೂಕ್ತ ಸಮಯದಲ್ಲಿ ಮಾಹಿತಿ ನೀಡುವ ಮೂಲಕ ಮಾನವ ಆನೆ ಸಂಘರ್ಷ ತಡೆಗಟ್ಟಲು ವಾಹನಗಳು ನೆರವಾಗಲಿವೆ ಎಂದು ತಿಳಿಸಿದರು.



## 1 ಲಕ್ಷ ರೂ.ನಗದು, ಬೆಳ್ಳಿ ಆಭರಣ ಕಳವು

• ಪ್ರಜೋದಯ ವರದಿ

**ಅರಸೀಕೆರೆ:** ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಬಾಗಿಲ ಬೀಗ ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 1.46 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ನಗರದ ಪ್ರಿಯದರ್ಶಿನಿ ಶಾಲೆ ಹಿಂಭಾಗದ ರಸ್ತೆಯ ಮನೆಯಲ್ಲಿ ನಡೆದಿದೆ.

ನಿವಾಸಿ ಎನ್.ಟಿ.ವೇದಾವತಿ ಅವರ ಮನೆಯಲ್ಲಿ ಜೂ.23ರ ರಾತ್ರಿ ಕಳ್ಳತನವಾಗಿದೆ. ಬೆಂಗಳೂರಿನ ಸಂಬಂಧಿಕರ ಮನೆಯ ಗೃಹ ಪ್ರವೇಶ ಸಮಾರಂಭಕ್ಕಾಗಿ ಎಲ್ಲರೂ ಮನೆಗೆ ಬೀಗ ಹಾಕಿಕೊಂಡು ತೆರಳಿದ್ದರು. ಮಾರನೇ ದಿನ ಎದುರು ಮನೆಯವರು ಬಾಗಿಲು ಮುರಿದಿರುವುದನ್ನು ಗಮನಿಸಿ ಮಾಲೀಕರಿಗೆ ಕರೆ ಮಾಡಿ ತಿಳಿಸಿದ್ದಾರೆ.

ಬಲವಾದ ಆಯುಧದಿಂದ ಬಾಗಿಲ ಬೀಗ ಮುರಿದಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ ಬೆಳ್ಳಿ ತಟ್ಟೆ, ಬೆಳ್ಳಿ ಲೋಟ, ಬೆಳ್ಳಿ ಪಂಚಪಾತ್ರೆ, 2 ಜೊತೆ ಕುಂಕುಮ ಬಟ್ಟಲು, ಒಂದು ಜೊತೆ ಬೆಳ್ಳಿಯ ತುಪ್ಪದ ದೀಪ, ಒಂದು ಜೊತೆ ಬೆಳ್ಳಿ ದೀಪ, ಬೆಳ್ಳಿ ಉಡಿದಾರ, ಬೆಳ್ಳಿ ಬಳೆ, ಬಟ್ಟೆ ಕೆಳಗೆ ಇಟ್ಟಿದ್ದ 1 ಲಕ್ಷ ರೂ. ನಗದು, 3 ಗ್ರಾಂ ತೂಕದ ಒಂದು ಜೊತೆ ಚಿನ್ನದ ಓಲೆ ಮತ್ತು ಅಡುಗೆ ಮನೆಯ ಗಾಡ್ರೇಜ್ ಬೀರುವಿನಲ್ಲಿದ್ದ 7 ಸಾವಿರ ರೂ. ಕದ್ದಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಲಿಂಗೇಶ್ ರಾಜಕೀಯ ಭವಿಷ್ಯ ಹಾಳು ಮಾಡುವ ಹುನ್ನಾರ




• ಪ್ರಜೋದಯ ವರದಿ

**ಹಾಸನ:** ಬಗರ್ ಹುಕುಂ ಯೋಜನೆಯಡಿ ನಡೆದಿದೆ ಎನ್ನಲಾದ ಅಕ್ರಮ ಭೂ ಮಂಜೂರು ಹೆಸರಿನಲ್ಲಿ ಬೇಲೂರಿನ ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರ ರಾಜಕೀಯ ಭವಿಷ್ಯ ಹಾಳು ಮಾಡುವ ಹುನ್ನಾರ ನಡೆಯುತ್ತಿದೆ ಎಂದು ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಎನ್.ಪರಮೇಶ್ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಲಿಂಗೇಶ್ ಅವರು ನಿಜವಾಗಿಯೂ ತಪ್ಪು ಮಾಡಿದ್ದಾರೆಯೇ ಅಥವಾ ಬೇಜವಾಬ್ದಾರಿತನ ಹಾಗು ಆಡಳಿತಾತ್ಮಕ ಲೋಪಗಳಿಂದ ಪ್ರಕರಣದಲ್ಲಿ ಸಿಲುಕಿದ್ದಾರೆಯೇ ಎಂಬುದು ತನಿಖೆಯಿಂದಲೇ ಸ್ಪಷ್ಟವಾಗಬೇಕು. ಸರಳ, ಸಜ್ಜನ ವ್ಯಕ್ತಿತ್ವದ ಲಿಂಗೇಶ್ ಅವರನ್ನು ಏಕಾಏಕಿ ಬಂಧಿಸಿರುವುದು ಕ್ಷೇತ್ರದ ಜನರು, ಲಿಂಗಾಯತ ಸಮುದಾಯ ಹಾಗು ಕುಟುಂಬಸ್ಥರಿಗೆ ಆಘಾತವುಂಟು ಮಾಡಿದೆ. ಬಗರ್ ಹುಕುಂ ಸಮಿತಿ ಅಧ್ಯಕ್ಷರಾಗಿದ್ದಾಗ ಏನಾಗಿದೆ ಎಂಬುದರ ಕುರಿತು ತನಿಖೆ ನಂತರವೇ ಬಹಿರಂಗವಾಗಬೇಕೆಂದರು.

ಆಗಿನ ಅಧಿಕಾರಿಗಳು ಅಥವಾ ಸಮಿತಿಯಲ್ಲಿದ್ದವರ ಲೋಪದೋಷದಿಂದ ಲಿಂಗೇಶ್ ಅವರು ಪ್ರಕರಣದಲ್ಲಿ ಸಿಲುಕಿರುವ ಅನುಮಾನವಿದೆ. ಬಗರ್ ಹುಕುಂ ಸಮಿತಿ ಅಧ್ಯಕ್ಷರಾಗಿ ಸಾರ್ವಜನಿಕರ ಪರವಾಗಿ ಕೆಲಸ ಮಾಡಿದ್ದರು. ಅವರಿಗೆ ನ್ಯಾಯ ಸಿಗಬೇಕೆಂದು ಪ್ರತಿ ಪಾದಿಸಿದರು.

ಜೆಡಿಎಸ್ ಪಕ್ಷದಲ್ಲಿ ಲಿಂಗೇಶ್ ಅವರು ನಿಷ್ಠಾವಂತ ಕಾರ್ಯಕರ್ತರಾಗಿ ಕೆಲಸ ಮಾಡಿದ್ದರು. ಇಂತಹ ಸಂದರ್ಭದಲ್ಲಿ ಪಕ್ಷದ ನಾಯಕರು ಅಥವಾ ಕಾರ್ಯಕರ್ತರು ಈ ವಿಚಾರವಾಗಿ ಸ್ಪಷ್ಟವಾಗಿ ಮಾತನಾಡದೇ ಇರುವುದು ಹಲವು ಪ್ರಶ್ನೆ ಹುಟ್ಟಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಯಾವುದೇ ರಾಜಕೀಯ ಷಡ್ಯಂತ್ರಕ್ಕೂ ಅವರು ಬಲಿಯಾಗಬಾರದು. ಈ ಸಂಕಷ್ಟದ ಸಮಯದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ಅವರ ಕುಟುಂಬದೊಂದಿಗೆ ನಿಲ್ಲಲಿದೆ ಎಂದು ಭರವಸೆ ನೀಡಿದರು.

ಪ್ರಕರಣದ ಬಗ್ಗೆ ಹಲವು ಅನುಮಾನವಿದ್ದು, ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಸತ್ಯಾಂಶ ಹೊರಬಂದು ಲಿಂಗೇಶ್ ಅವರಿಗೆ ನ್ಯಾಯ ದೊರಕಲಿ ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಯತೀಶ್, ಜಯಶಂಕರ್, ಗೀತಾಸ್ವಾಮಿ, ಯೋಗೀಶ್, ಶಿವಣ್ಣ ಇದ್ದರು.

## ಬಾಣಾವರದಲ್ಲಿ ಭಾವೈಕ್ಯತೆಯ ಮೊಹರಂ ಆಚರಣೆ



**ಬಾಣಾವರ:** ಪಟ್ಟಣದ ಪೇಟೆ ಬಡಾವಣೆಯಲ್ಲಿ ಮೊಹರಂ ಹಬ್ಬದ ಅಂಗವಾಗಿ 9ನೇ ದಿನದ ಆಚರಣೆ ಸಂಪ್ರದಾಯ ಬದ್ಧವಾಗಿ ನಡೆಯಿತು. ಕೆಂಡ ತುಳಿಯುವ ವಿಶಿಷ್ಟ ಆಚರಣೆ ಹಿಂದೂ-ಮುಸ್ಲಿಂ ಭಾವೈಕ್ಯದ ಸಂಕೇತವಾಗಿ ಗಮನ ಸೆಳೆಯಿತು.

ಸಂಪ್ರದಾಯದಂತೆ ಮುಸ್ಲಿಂ ಸಮಾಜದವರು ಬಾಬಯ್ಯನ ಆರಾಧನೆ ನಡೆಸಿ, ಬಳಿಕ ಬಾಬಯ್ಯನನ್ನು ಹೊತ್ತು ಕೆಂಡ ತುಳಿದರು. ಈ ವೇಳೆ ಹಿಂದೂ ಸಮಾಜದವರೂ ಕೆಂಡದ ಗುಂಡಿಗೆ ಕಾಳು ಮೆಣಸು, ಉಪ್ಪು ಹಾಗು ಹರಕೆಯ ಚಿಲ್ಲರೆ ನಾಣ್ಯಗಳನ್ನು ಅರ್ಪಿಸಿ ತಮ್ಮ ಇಷ್ಟಾರ್ಥಗಳು ಈಡೇರುವಂತೆ ಪ್ರಾರ್ಥಿಸಿದರು. ಹಲವು ವರ್ಷಗಳಿಂದ ನಡೆದು ಬಂದಿರುವ ಈ ಸಂಪ್ರದಾಯ ಎರಡೂ ಸಮುದಾಯಗಳ ಸೌಹಾರ್ದದ ಪ್ರತೀಕವಾಗಿದೆ.

ಹಿಂದೂ ಸಮಾಜದವರು ಬಾಬಯ್ಯನಿಗೆ ಸಕ್ಕರೆ, ಕಡಲೆ ಸಮರ್ಪಿಸಿ ಭಕ್ತಿ ಸಲ್ಲಿಸಿದರು. ನಂತರ ಬಾಬಯ್ಯನ ದರ್ಶನ ಪಡೆದ ಭಕ್ತರು ತಮ್ಮ ಹರಕೆಗಳನ್ನು ಕೆಂಡದ ಗುಂಡಿಯಲ್ಲಿ ಅರ್ಪಿಸಿದರು. ಶೈನ್ ಶಾ ಮುಖಾನ್, ಸದ್ದಾಂ, ಆಯಾದ್ ಸಾಬ್, ಇಮ್ರಾನ್, ಗೌಸ್, ಮಹಮ್ಮದ್ ದಸ್ತಗಿರಿ, ಮುಹೀಬ್, ಬೇಟು, ರಫೀಕ್ ಭಾಗವಹಿಸಿದ್ದರು.

## ಸಹಾಯಕ ಕೃಷಿ ನಿರ್ದೇಶಕಿ ಕೆ.ಜಿ.ಕವಿತಾ ಮನವಿ

# ರೈತರು ಕಡ್ಡಾಯವಾಗಿ ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಿ

• ಪ್ರಜೋದಯ ವರದಿ

**ಕೊಣನೂರು:** ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರೈತರು ಕಡ್ಡಾಯವಾಗಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆಯಡಿ ಬೆಳೆ ವಿಮೆಗೆ ನೋಂದಾಯಿಸಿಕೊಂಡು ಪ್ರಕೃತಿ ವಿಕೋಪದಿಂದ ಉಂಟಾಗುವ ನಷ್ಟದಿಂದ ಆರ್ಥಿಕ ಭದ್ರತೆ ಪಡೆಯಬೇಕೆಂದು ಸಹಾಯಕ ಕೃಷಿ ನಿರ್ದೇಶಕಿ ಕೆ.ಜಿ.ಕವಿತಾ ಅವರು ಮನವಿ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯಲ್ಲಿ ಟೋಕಿಯೋ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್‌ನ ಸಹಯೋಗದಲ್ಲಿ ಹೋಬಳಿ ಹಾಗು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ರೈತರುಪಹಣಿ, ಕಂದಾಯ ರಸೀದಿ, ಖಾತೆ ಪುಸ್ತಕ, ಬ್ಯಾಂಕ್ ಪಾಸ್‌ಬುಕ್ ಹಾಗು ಆಧಾರ್ ಕಾರ್ಡ್ ದಾಖಲೆಗಳೊಂದಿಗೆ ಸಮೀಪದ ಬ್ಯಾಂಕ್, ಕರ್ನಾಟಕ ಒನ್, ಗ್ರಾಮ ಒನ್ ಹಾಗು ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಬಹುದೆಂದು ತಿಳಿಸಿದರು.

2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಹೆಸರು (ಮಳೆ ಆಶ್ರಿತ) ಬೆಳೆಗೆ ಪ್ರತಿ ಎಕರೆಗೆ 321 ರೂ., ಉದ್ದು (ಮಳೆ ಆಶ್ರಿತ) 314 ರೂ. ಹಾಗು ಎಳ್ಳು (ಮಳೆ ಆಶ್ರಿತ) 258 ರೂ. ವಿಮಾ ಕಂತು ನಿಗದಿಯಾಗಿದ್ದು, ಜೂನ್ 30 ನೋಂದಣಿಗೆ ಕೊನೆಯ ದಿನವಾಗಿದೆ. ಅದೇ ರೀತಿ ಅಲಸಂದೆ (ಮಳೆ ಆಶ್ರಿತ) 283 ರೂ., ಆಲೂಗಡ್ಡೆ 1,667 ರೂ., ಟೊಮಾಟೊ 3,436 ರೂ. ಹಾಗು ಹತ್ತಿ (ಮಳೆ ಆಶ್ರಿತ) 1,208 ರೂ. ವಿಮಾ ಕಂತು ಪಾವತಿಸಿ ಜುಲೈ 15 ರೊಳಗೆ ನೋಂದಾಯಿಸಿ ಕೊಳ್ಳಬಹುದಾಗಿದೆ ಎಂದರು.

ಭತ್ತ (ಮಳೆ ಆಶ್ರಿತ) 612, ಮುಸುಕಿನ ಜೋಳ (ನೀರಾವರಿ) 617, ಮುಸುಕಿನ ಜೋಳ (ಮಳೆ ಆಶ್ರಿತ) 546, ಜೋಳ (ಮಳೆ ಆಶ್ರಿತ) 359 ಹಾಗು ತೊಗರಿ (ಮಳೆ ಆಶ್ರಿತ) 466 ವಿಮಾ ಕಂತು ಪಾವತಿಸಿ ಜುಲೈ 31ರೊಳಗೆ ನೋಂದಣಿ ಮಾಡಿಸ ಬೇಕೆಂದು ತಿಳಿಸಿದರು.

ಭತ್ತ (ನೀರಾವರಿ) 879 ರೂ., ರಾಗಿ (ಮಳೆ ಆಶ್ರಿತ) 404 ರೂ., ರಾಗಿ (ನೀರಾವರಿ) 472 ರೂ. ಹಾಗು ಹುರಳಿ (ಮಳೆ ಆಶ್ರಿತ) 190 ವಿಮಾ ಕಂತು ಪಾವತಿಸಿ ಆಗಸ್ಟ್14ರೊಳಗೆ ನೋಂದಾಯಿಸಿಕೊಳ್ಳಲು ಅವಕಾಶವಿದೆ ಎಂದು ಮಾಹಿತಿ ನೀಡಿದರು.

ಬೆಳೆ ವಿಮೆ ಕುರಿತು ಹೆಚ್ಚಿನ ಮಾಹಿತಿಗಾಗಿ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ,ಸಹಕಾರ ಇಲಾಖೆ, ಬೆಳೆ ವಿಮಾ ಸಂಸ್ಥೆ ಹಾಗೂ ಬೆಳೆ ಸಾಲ ನೀಡುವ ಬ್ಯಾಂಕ್ ಅಥವಾ ಸಹಕಾರಿ ಬ್ಯಾಂಕ್‌ಗಳನ್ನು ಸಂಪರ್ಕಿಸುವಂತೆ ರೈತರಿಗೆ ಮನವಿ ಮಾಡಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019